ಬೆಲೆ ರೂ.2.50
D.O.P - 15th of every month at Udupi Sorting Office

ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551

ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-18 ಸಂಚಿಕೆ-10 ಪುಟಗಳು-10 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶೃಂಗೇರಿಯಲ್ಲಿ ಉಭಯ ಗುರುವರೇಣ್ಯರುಗಳ ಚಾತುರ್ಮಾಸ ಆಚರಣೆ





ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದಿಂದ, ಪ್ರತಿವರ್ಷವೂ ಗಣೇಶ ಚತುರ್ಥಿಯ ಹಿಂದಿನ ಭಾನುವಾರ ಚಾತುರ್ಮಾಸ ನಿರತ ಗುರುಗಳ ಭೇಟಿಗಾಗಿ ತೆರಳುವುದು ವಾಡಿಕೆ. ಈ ವರ್ಷವೂ ಗುರುಗಳ ಭೇಟಿಗಾಗಿ ಸುಮಾರು ನೂರು ಜನರು ಒಂದಾಗಿ ಸೇರಿ ಐದು ವಾಹನಗಳಲ್ಲಿ ದಿನಾಂಕ 09.09.2018ರಂದು ಬೆಳಿಗ್ಗೆ ಏಳುವರೆ ಗಂಟೆಗೆ ಉಡುಪಿ ಶಾರದಾ ಮಂಟಪದಿಂದ ಹೊರಟೆವು. ಮಧ್ಯದಲ್ಲಿ ಹೆಬ್ರಿ ಅನಂತಪದ್ಮನಾಭ ದೇವಸ್ಥಾನದ ಭೋಜನ ಶಾಲೆಯಲ್ಲಿ ಉಪಹಾರ ಸೇವಿಸಿ, ಹತ್ತುವರೆ ಗಂಟೆಗೆ ಶೃಂಗೇರಿ ತಲುಪಿದೆವು. ದೇವಿ ಶ್ರೀ ಶಾರದಾಂಬೆಯ ದರ್ಶನ ಪಡೆದು ಗುರುಧಾಮಕ್ಕೆ ನಡೆದು ಉಭಯ ಶ್ರೀಗಳ ದರ್ಶನಕ್ಕೆ ಹಾಗೂ ಅವರ ಆಶೀರ್ವಚನ ಆಲಿಸಲು ಕಾತುರದಿಂದ ಕಾದು ಕುಳಿತೆವು. ಸಭಾಂಗಣವು ನಮ್ಮ ಸಮಾಜಬಾಂಧವರಿಂದ ಕಿಕ್ಕಿರಿದು ತುಂಬಿ ತುಳುಕುತ್ತಿತ್ತು. ಗುರುಪಾದಪೂಜೆ/ಪಾದಕಾಣಿಕೆ ಇತ್ಯಾದಿ ಸಮರ್ಪಣಾ ಕಾರ್ಯವು ಈ ಮಧ್ಯೆ ನಡೆಯುತ್ತಿತ್ತು. ನಾವು ಕೂಡಾ ಪಾದಪೂಜೆ ನೆರವೇರಿಸಿದೆವು. ನಮ್ಮ ಹಾಗೂ ವಿವಿಧ ಸಂಘಗಳಿಂದ ಹೊರೆಕಾಣಿಕೆಯೂ ಸಮರ್ಪಿತವಾಗಿತ್ತು.

ಹಿರಿಯ ಗುರುವರೇಣ್ಯರಾದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರು ಸಮಸ್ತರಿಗೂ ಆಶೀರ್ವದಿಸಿ ಸಂತೃಪ್ತರಾಗಿ ಮುಂದಿನ ಕಾರ್ಯಕ್ರಮವನ್ನು ತಮ್ಮ ಶಿಷ್ಯ ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರಿಗೆ ಒಪ್ಪಿಸಿ, ತಾವು ಮಧ್ಯಾಹ್ನದ ಅನುಷ್ಠಾನಗಳಲ್ಲಿ ಭಾಗಿಯಾಗುವರೆ ತೆರಳಿದರು.

ಮುಂದಕ್ಕೆ ಶ್ರೀ ಶೃಂಗೇರಿ ಮಠದ ಕೋಟೆಕಾರು ಶಾಖೆಯ ಧರ್ಮಾಧಿಕಾರಿಗಳಾದ ಶ್ರೀ ಬೊಳ್ಳಾವ ಸತ್ಯಶಂಕರರು, ನಮ್ಮ ಸಮಾಜ ಹಾಗೂ ಶ್ರೀ ಶೃಂಗೇರಿ ಜಗದ್ಗುರುಗಳ ನಿಕಟ ಸಂಬಂಧದ ಬಗ್ಗೆ ಪ್ರಸ್ತಾಪಿಸುತ್ತಾ, ಕಿರಿಯ ಗುರುಗಳು ನಮ್ಮನ್ನು ಉದ್ದೇಶಿಸಿ ಮಾತನಾಡಿ ಆಶೀರ್ವದಿಸಲಿರುವರೆಂದು ಘೋಷಿಸಿದರು. ಅಂತೆಯೇ ಕಿರಿಯ ಗುರುವರೇಣ್ಯರು ಚಾತುರ್ಮಾಸದ ವಿಶೇಷತೆ ತಿಳಿಸಿ ನಮ್ಮ ಭೇಟಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಐಕ್ಯಮತ್ಯದಿಂದ ಬಂದು ಶ್ರೀ ಶಾರದಾಂಬೆಯ ಹಾಗೂ ಶ್ರೀ ಗುರುಗಳ ಕೃಪೆಗೆ ಪಾತ್ರರಾಗಬೇಕೆಂದು ಅಪ್ಪಣೆ ಕೊಡಿಸಿದರು.

ಇನ್ನು ಐಕ್ಯಮತ್ಯದ ಬಗ್ಗೆ ವಿಶ್ಲೇಷಿಸುತ್ತಾ ಉದಾಹರಣೆಯೊಂದನ್ನು ಸಣ್ಣ ಕಥಾನಕದ ಮೂಲಕ ನೀಡಿ "ಐಶ್ವರ್ಯಕ್ಕಿಂತ ಭಗವತ್ ಸಾನ್ನಿಧ್ಯವೇ ಶ್ರೇಷ್ಠ" ವೆಂದು ನಿರೂಪಿಸಿದರು. ಅಂತಿಮವಾಗಿ, ಹಿರಿಯಗುರುಗಳು ಹೇಳುವಂತೆ "ಪ್ರೀತಿಯ ಸ್ಥಾನಿಕ ಬ್ರಾಹ್ಮಣ ಸಮಾಜದ" ಶ್ರೇಯಸ್ಸಿಗೆ ಶ್ರೀ ಶಾರದಾಂಬೆ ಹಾಗೂ ಶ್ರೀ ಚಂದ್ರಮೌಳೀಶ್ವರರ ಕೃಪೆ ಅನವರತವಿರಲಿ ಎಂದು ಹಾರೈಸುತ್ತಾ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಹಾಗೂ ಶಿಷ್ಯವರ್ಗದವರಿಗೆ ಫಲಮಂತ್ರಾಕ್ಷತೆ ವಿತರಿಸಿದರು. ಮಹಿಳೆಯರಿಗೆ ವಸ್ತ್ರ ಪ್ರಸಾದವನ್ನು ನೀಡಲಾಯಿತು. ಪ್ರಸಾದ ಭೋಜನದ ನಂತರ, ಸಮಾಜಬಾಂಧವರು, ಪರಊರಿನಿಂದ ಬಂದ ಸ್ನೇಹಿತರು, ಆಪ್ತರು ಹಾಗೂ ಸಂಬಂಧಿಕರನ್ನು ವಿಚಾರಿಸುತ್ತಾ ಹೊರಟು ಅವರವರ ವಾಸಸ್ಥಳಕ್ಕೆ ನಿರ್ಗಮಿಸಿದರು.

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿಯ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸರ್ವಸದಸ್ಯರು ಶ್ರೀ ಶೃಂಗೇರಿ ಪ್ರಯಾಣವನ್ನು ನಿರಾತಂಕವಾಗಿ ನಡೆಸಿಕೊಟ್ಟು ಸಮಾಜ ಬಾಂಧವರ ಮೆಚ್ಚುಗೆ ಗಳಿಸಿದರು.

ವರದಿ: ಜಿ.ಕೆ. ಕೋಳ್ವೆ

## ಮಹಿಳಾವೇದಿಕೆಯಿಂದ ಹೂವಿನ ಪೂಜೆ



ತಾ.07–09–2018ರಂದು ಮಹಿಳಾವೇದಿಕೆಯ ವತಿಯಿಂದ ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಹೂವಿನ ಪೂಜೆಯು ನೆರವೇರಿತು. ಸಂಜೆ ಐದು ಗಂಟೆಗೆ ದೇವಸ್ಥಾನದಲ್ಲಿ ಕಾರ್ಯಕ್ರಮವು ಆರಂಭವಾಯಿತು. ಶ್ರೀ ಶಾರದಾ ಭಜನಾಮಂಡಳಿಯ ಸದಸ್ಯೆಯರು ಹಾಗೂ ಪರಿಸರದ ಭಕ್ತರು ಲಲಿತಾ ಸಹಸ್ರನಾಮ, ಸೌಂದರ್ಯಲಹರಿ ಹಾಗೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣವನ್ನು ಮಾಡಿದರು. ಸ್ವಾಧ್ಯಾಯ ತಂಡದವರಿಂದ ರುದ್ರ ಪಠಣ ನೆರವೇರಿತು. ಶಾರದೆಯ ಮೂರ್ತಿಯನ್ನು ಪುಷ್ಪ ಹಾಗೂ ಸ್ವರ್ಣಾಭರಣಗಳಿಂದ ಅಲಂಕರಿಸಲಾಗಿತ್ತು. ಸುಮಾರು ಏಳು ಗಂಟೆಗೆ ಮಹಾಪೂಜೆ ಮಂಗಳಾರತಿ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ದಂಪತಿಗಳು ಸಂಘದ ಪರವಾಗಿ ಪ್ರಸಾದ ಸ್ವೀಕರಿಸಿದರು. ಸುಮಾರು ನೂರೈವತ್ತು ಜನ ಭಕ್ತರು ಭಾಗವಹಿಸಿದ್ದರು.

**ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ ನವರಾತ್ರಿ ಹಾಗೂ ದೀಪಾವಳಿ ಹಬ್ಬಗಳ ಶುಭಾಶಯಗಳು**



## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

**ಆಮಂತ್ರಣ**

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ವಿಳಂಬಿ ನಾಮ ಸಂವತ್ಸರದ ತುಲಾ ಮಾಸ ದಿನ ೨ ಸಲುವ ಅಶ್ವಯುಜ ಶುದ್ಧ (ದಶಮಿ) ೧೦ ಯು, ತಾ.19-10-2018ನೇ ಶುಕ್ರವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಶ್ರೀ ಯು. ಅರವಿಂದ ಕುಮಾರ್ | ಶ್ರೀ ಬಿ. ಜಯರಾಮ ರಾವ್ | ಶ್ರೀ ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷ ನವರಾತ್ರಿಯ ಪ್ರತೀದಿನ ಸಂಜೆ ಶ್ರೀಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ಕರ್ತೃಗಳಾಗಬಯಸುವವರಿಗೆ ರೂ.5000/– ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ 9343560647 ಅಥವಾ ಮಂಟಪದ ಮ್ಯಾನೇಜರ್ 9448108920 ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಈ ದೇಶದ ಮೂಲನಿವಾಸಿಗಳು ಯಾರು? ಹಿಂದೂಗಳು ಯಾರು ? ಬ್ರಾಹ್ಮಣರು ಯಾರು? ಅವರು ಮೂಲತಃ ಈ ದೇಶದವರಲ್ಲವೇ? ಹಾಗಾದರೆ ಎಲ್ಲಿಂದ ಬಂದರು? ಯಾವಾಗ ಬಂದರು? ಇತ್ಯಾದಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ಇಲ್ಲಿಯ ತನಕ ಕೊಟ್ಟವರಿಲ್ಲ. ಬೂದಿಮುಚ್ಚಿದ ಕೆಂಡದಂತೆ ಸುಮ್ಮನಿರುವ ಈ ಪ್ರಶ್ನೆಗಳು ಒಮ್ಮೆಲೆ ಬುಗಿಲೆದ್ದು ಪುನಃ ತಣ್ಣಗಾಗುವುದು ಆವಾಗಾವಾಗ ಸಂಭವಿಸುವ ವಿದ್ಯಮಾನವಾಗಿದೆ. ಬ್ರಿಟಿಷರು ಭಾರತದ ಇತಿಹಾಸದಲ್ಲಿ ಪ್ರವೇಶ ಮಾಡಿದ ನಂತರ ಅವರೇ ಹುಟ್ಟಿಸಿದ್ದ ಈ ಪ್ರಶ್ನೆಗಳಿಗೆ ಉತ್ತರವಾಗಿ "ಆರ್ಯ, ದ್ರಾವಿಡ" ರೆಂಬ ವಾದವೊಂದು ಹುಟ್ಟಿತು. ಈ ವಾದದ ಪ್ರಕಾರ ಆರ್ಯರು ಸಾವಿರಾರು ವರ್ಷಗಳ ಮುಂಚೆ ಉತ್ತರ ಯುರೋಪ್‌ನಿಂದ ಇರಾನ್, ಅಫಘಾನಿಸ್ತಾನದ ಮಾರ್ಗವಾಗಿ ಉತ್ತರ ಭಾರತಕ್ಕೆ ವಲಸೆ ಬಂದವರು. ನಂತರ ನಿಧಾನವಾಗಿ ದಕ್ಷಿಣ ಭಾರತದತ್ತ ಮುಂದೊತ್ತಿದರು. ಇವರು ವೇದಗಳನ್ನು ತಂದವರು. ಇವರು ಈಗ ಬ್ರಾಹ್ಮಣರೆಂದು ಕರೆಯುವ ವರ್ಗದ ಪೂರ್ವಜರು. ಅವರು ವಲಸೆ ಬರುವಾಗ ಇಲ್ಲಿದ್ದವರು ದ್ರಾವಿಡರು. ಅವರು ಆದಿವಾಸಿಗಳು. ಅವರು ಬ್ರಾಹ್ಮಣೇತರರ ಪೂರ್ವಜರು. ಇದು ಆರ್ಯ ದ್ರಾವಿಡ ಸಿದ್ಧಾಂತದ ಸಾರಾಂಶ. ಆರ್ಯ ದ್ರಾವಿಡ ವಾದವು ಒಂದು ಊಹೆಯೇ ಹೊರತು ಅದನ್ನು ಇದಮಿತ್ಥಂ ಎಂದು ಸಮರ್ಥಿಸುವ ಪುರಾವೆಗಳಿಲ್ಲ. ಆದರೆ ಬ್ರಿಟಿಷರು ಈ ವಾದವನ್ನು ಬೆಂಬಲಿಸಿದರು. ಇದಕ್ಕೆ ಕಾರಣಗಳು ಇತ್ತು. ಮೊದಲನೆಯದಾಗಿ ಆಗ ಭಾರತದ ಸ್ವಾತಂತ್ರ್ಯ ಹೋರಾಟ ಕಾವು ಪಡೆದುಕೊಳ್ಳುತ್ತಿತ್ತು. ಬ್ರಾಹ್ಮಣರು ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಎರಡನೆಯದಾಗಿ ಬ್ರಿಟಿಷರಿಗೆ ತಮ್ಮ ಧರ್ಮವನ್ನೂ ಸಹಾ ಈ ದೇಶದಲ್ಲಿ ಪ್ರಚಾರ ಮಾಡಬೇಕಾಗಿತ್ತು. ಆದರೆ ಬ್ರಾಹ್ಮಣರಿಗೆ ಇಲ್ಲಿಯ ಜನರ ಮೇಲಿದ್ದ ಪ್ರಭಾವ ಅದಕ್ಕೆ ಅಡ್ಡಿಯಾಗಿತ್ತು. ಹಾಗಾಗಿ ಅವರು ಈ ಸಿದ್ಧಾಂತವನ್ನು ಬಳಸಿಕೊಂಡು ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ಕಂದಕವನ್ನು ಸೃಷ್ಟಿಸಿದರು. ಅಷ್ಟು ಮಾತ್ರವಲ್ಲದೇ ನೀವೇ (ಬ್ರಾಹ್ಮಣರು, ಆರ್ಯರು) ಹೊರಗಿನವರಾಗಿರುವಾಗ ನಾವು ಇಲ್ಲಿಗೆ ಬಂದದ್ದನ್ನೇಕೆ ವಿರೋಧಿಸುತ್ತೀರಿ ಎಂದು ಯುರೋಪಿಯನ್ನರ ಆಕ್ರಮಣವನ್ನು ವಿರೋಧಿಸುತ್ತಿದ್ದ ಭಾರತೀಯರ ಬಾಯಿಯನ್ನು ಮುಚ್ಚಿಸಲೂ ಪ್ರಯತ್ನಿಸಿದರು. ಆರ್ಯರು ಹೊರಗಿನಿಂದ ಬಂದವರೇ ಆಗಿದ್ದರೂ ಕೂಡ, ಅವರು ಈ ದೇಶವನ್ನು ಕಟ್ಟಿದವರು – ಬೆಳೆಸಿದವರು – ಸಂಸ್ಕೃತಿಗೆ ಕಾರಣ ಪುರುಷರು, ಇತರರ ತರಹ ಇಲ್ಲಿಯದ್ದನ್ನು ದೋಚಿದವರಲ್ಲ – ಹಾಳುಗೆಡವಿದವರಲ್ಲವೆಂಬುದನ್ನು ಮರೆತು ನಮ್ಮ ದೇಶದಲ್ಲಿ ಅನೇಕರು ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ನಂತರವೂ ಈ ಸಿದ್ಧಾಂತವನ್ನೇ ಪದೇ ಪದೇ ಹೋದಲ್ಲೆಲ್ಲಾ ಪಠಿಸುತ್ತಿರುವುದು ದುರಂತ. ನಿಜವಾಗಿ ಹೇಳುವುದಾದರೆ "ಆರ್ಯ" ಎಂಬ ಶಬ್ದದ ಅರ್ಥ "ಧರ್ಮವನ್ನು ಪಾಲಿಸುವವನು" ಎಂದಾಗಿದೆ.

ಪಂಜಾಬ್, ಹರಿಯಾಣ, ಪಾಕಿಸ್ತಾನ, ಬಲೂಚಿಸ್ತಾನದಲ್ಲಿ ಪತ್ತೆಯಾದ ಹರಪ್ಪ ಹಾಗೂ ಮೊಹಂಜದಾರೋ ಸಂಸ್ಕೃತಿ ಎಂದೇ ಕರೆಯಲಾಗುವ ಇಂಡಸ್ ಕಣಿವೆಯ ಸುತ್ತ ಇದ್ದ ನಾಗರಿಕತೆ ವೇದಕಾಲಕ್ಕೂ ಪೂರ್ವದ್ದು. ಅಥವಾ ವೇದ ಕಾಲದ ಆರಂಭದ್ದೂ ಇರಬಹುದು. ಈ ಅರ್ಥದಲ್ಲಿ ಇದನ್ನು ಸರಸ್ವತೀ ನಾಗರೀಕತೆ ಎಂದೂ ಕರೆಯುತ್ತಾರೆ. ಇದು ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಲಾಹೋರ್–ಪಂಜಾಬ್ ರೇಲ್ವೇ ಮಾರ್ಗಕ್ಕಾಗಿ ಅಗಿಯುತ್ತಿರುವಾಗ ಬೆಳಕಿಗೆ ಬಂತು. ಹರಪ್ಪ ಮೊಹೆಂಜೆದಾರೋ ಬೆಳಕಿಗೆ ಬಂದ ಮೇಲೆ ಇಲ್ಲಿಯ ತನಕ ಈ ಭೂಭಾಗಕ್ಕೆ ಮೊತ್ತಮೊದಲಾಗಿ ಸಂಸ್ಕೃತಿಯೊಂದನ್ನು ಹೊರಗಿನಿಂದ ತಂದವರು ಆರ್ಯರು ಎಂದು ಬಿಂಬಿಸಿದ್ದು ರುಸ್ವಾಯಿತು. ಹಾಗಾದರೆ ಆರ್ಯರು ಯಾರು? ಅಥವಾ ಆರ್ಯರು ಬರುವ ಮುಂಚೆ ಇಲ್ಲೊಂದು ನಾಗರೀಕತೆ ಇದ್ದು ಅದು ಆರ್ಯರಿಂದ ನಾಶವಾಯಿತೆ? ಅಥವಾ ಅದನ್ನೇ ಆರ್ಯರು ಬೆಳೆಸಿಕೊಂಡು ಬಂದರೇ? ಅಥವಾ ಆರ್ಯರು ಹೊರಗಿನಿಂದ ಬಂದವರು ಎಂಬುದೇ ಸುಳ್ಳೇ? ಎಂಬೆಲ್ಲಾ ಪ್ರಶ್ನೆಗಳನ್ನು ಹುಟ್ಟುಹಾಕಿತು. ಅದಕ್ಕೆ ಸರಿಯಾಗಿ ಹರಪ್ಪ ಕಣಿವೆಯಲ್ಲಿ ಸಿಕ್ಕಿದ ಎಲುಬೊಂದರ ಡಿ.ಎನ್.ಎ ತಮಿಳುನಾಡಿನ ಯಾವುದೋ ಒಂದು ಆದಿವಾಸಿ ಪಂಗಡಕ್ಕೆ ಹೋಲಿಕೆಯಾಗುತ್ತದೆ ಎಂಬ ಸುದ್ದಿಗಳೂ ಬಂದವು. ಈ ಸುದ್ದಿಯ ಬಾಲವನ್ನು ಹಿಡಿದು ಇಡೀ ಭಾರತವೇ ಹರಪ್ಪ ಕಾಲದಲ್ಲಿ ದಕ್ಷಿಣ ಭಾರತೀಯರದ್ದಾಗಿತ್ತು. ಉತ್ತರ ಭಾರತೀಯರು ಅವರನ್ನು ದಕ್ಷಿಣಕ್ಕೆ ತಳ್ಳಿದರು ಎಂದು ಕಥೆ ಕಟ್ಟಿ ಭಾರತದೇಶವನ್ನು ಉತ್ತರ ಬೇರೆ ದಕ್ಷಿಣ ಬೇರೆ ಎಂದು ಒಡೆಯುವ ಎಂಬ ಹೊಸ ಹೂಟಕ್ಕೆ ಅದೃಷ್ಟವಶಾತ್ ಹೆಚ್ಚಿನ ಮನ್ನಣೆ ಸಿಗಲಿಲ್ಲ.

ಈ ಭಾರತ ದೇಶವನ್ನು ಇಷ್ಟೆಲ್ಲಾ ಭೌಗೋಳಿಕ, ಭಾಷೆ, ಜಾತಿ, ಜನಾಂಗಗಳೆಂಬ ಭೇದಗಳಿಂದ ಒಡೆಯುವ ಪ್ರಯತ್ನಗಳ ನಡುವೆಯೂ ಈ ದೇಶವನ್ನು ಒಂದಾಗಿ ಹಿಡಿದಿಟ್ಟಿರುವುದು ನಮ್ಮ ಸನಾತನ ಸಂಸ್ಕೃತಿ. ಶ್ರೀ ಆದಿಶಂಕರಾಚಾರ್ಯರು ಎಂಟನೆಯ ಶತಮಾನದಲ್ಲಿ ಈ ಭೂಭಾಗದ ಯಾವ ನಾಲ್ಕು ಮೂಲೆಗಳಿಗೆ ಸಂಚರಿಸಿ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದರೋ ಆ ಪರಿಧಿಯೊಳಗಿನ ಭೂಭಾಗ ಮಾತ್ರ ಇಂದು ಭಾರತದೇಶವಾಗಿ ಉಳಿದಿರುವುದೇ ಈ ಮಾತಿಗೆ ಪುರಾವೆ. ಭಾರತವನ್ನು ಒಂದಾಗಿ ಹಿಡಿದಿಡುವ ಕೆಲಸ ಯಾವ ರಾಜಮಹಾರಾಜರಿಂದಲೂ ಸಾಧ್ಯವಾಗದ್ದು ಓರ್ವ ಸನ್ಯಾಸಿಯಿಂದಾಯಿತು ಎಂದರೆ ಅಚ್ಚರಿಯಾಗುತ್ತದೆಯೆ? ಒಂದು ವೇಳೆ ಪಾಕಿಸ್ಥಾನ ಬಾಂಗ್ಲಾ ಚೀನಾಗಳಲ್ಲೂ ಸನಾತನ ಧರ್ಮವೇ ಉಳಿದಿದ್ದರೆ ನಮಗೆ ನೆರೆಹೊರೆಯಲ್ಲಿ ಶತ್ರುಗಳ ಬದಲು ಮಿತ್ರರೇ ಇರುತ್ತಿದ್ದರೇನೋ? ಹಾಗಾಗಿ ಈ ದೇಶದ ಉಳಿವಿಗೆ ಯಾವುದೇ ಶಸ್ತ್ರಾಸ್ತ್ರಗಳಿಗಿಂತ ಸಂಸ್ಕೃತಿಯ ಪೋಷಣೆಯೇ ಮುಖ್ಯ ಅಲ್ಲವೇ?.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ



*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☏ 2522408) ಕುಕ್ಕಿಕಟ್ಟೆ ಶಾಖೆ (☏ 2592133) ಪಡುಬಿದ್ರಿ ಶಾಖೆ (☏ 2556608) ಕೋಟೇಶ್ವರ ಶಾಖೆ (☏ 9341854114)






## ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.10-10-2018ರಿಂದ 18-10-2018ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ಸಂಜೆ ದುರ್ಗಾನಮಸ್ಕಾರ ಮತ್ತು ರಾತ್ರಿ ಗಂಟೆ 8-00ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ನವರಾತ್ರಿಯ ಒಂಭತ್ತು ದಿನವೂ ಸಂಜೆ 7-00ರಿಂದ 8-00ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102

### ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.19-10-2018ನೇ ಶುಕ್ರವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | | ಅವಧಿ |
|---|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-8ನೇ ತರಗತಿಯವರೆಗೆ (ನಮ್ಮೂರ ಜಾತ್ರೆ) | 9ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಪ್ರಕೃತಿ ವಿಕೋಪ) | | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-8ನೇ ತರಗತಿಯವರೆಗೆ | 9ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | | |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (4 ಶ್ಲೋಕ) | 5-8ನೇ ತರಗತಿಯವರೆಗೆ (4 ಶ್ಲೋಕ) | 9ನೇ ತರಗತಿಯಿಂದ ಮೇಲ್ಪಟ್ಟು ಪದವಿಪೂರ್ವ ತರಗತಿಯವರೆಗೆ (4 ಶ್ಲೋಕ) | ದೊಡ್ಡವರಿಗೆ (8 ಶ್ಲೋಕ) | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | | |
| **ಕನಕಾಧಾರ ಸ್ತೋತ್ರ** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

2-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ, ವಿದ್ಯಾರ್ಥಿವೇತನ ವಿತರಣೆ ಮತ್ತು ಮಹಿಳಾ ವೇದಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಮಕ್ಕಳ ಯಕ್ಷಗಾನ : ''ವೀರ ವೃಷಸೇನ'' ಹಾಗೂ ಹಿರಿಯ ಕಲಾವಿದರಿಂದ ''ಚಿತ್ರಾಕ್ಷಿ ಕಲ್ಯಾಣ'' ಸಮಯ: ಸಂಜೆ 5-00ರಿಂದ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

### (ಅಧ್ಯಾಯ – 15) ಪುರುಷೋತ್ತಮ ಪ್ರಾಪ್ತಿಯೋಗ – ಕಂಠಪಾಠಕ್ಕೆ

ಊರ್ಧ್ವಮೂಲಮಧಃಶಾಖಮ್
ಅಶ್ವತ್ಥಂ ಪ್ರಾಹುರವ್ಯಯಮ್ ।
ಛಂದಾಂಸಿ ಯಸ್ಯ ಪರ್ಣಾನಿ
ಯಸ್ತಂ ವೇದ ಸ ವೇದವಿತ್ ॥ ೧ ॥

ಅಧಶ್ಚೋರ್ಧ್ವಂಪ್ರಸೃತಾಸ್ತಸ್ಯಶಾಖಾಃ
ಗುಣ ಪ್ರವೃದ್ಧಾವಿಷಯ ಪ್ರವಾಲಾಃ ।
ಅಧಶ್ಚ ಮೂಲಾನ್ಯನುಸಂತತಾನಿ
ಕರ್ಮಾನು ಬಂಧೀನಿ ಮನುಷ್ಯ ಲೋಕೇ ॥ ೨ ॥

ನ ರೂಪಮಸ್ಯೇಹ ತಥೋಪಲಭ್ಯತೇ
ನಾಂತೋ ನ ಚಾದಿರ್ನ ಚ ಸಂಪ್ರತಿಷ್ಠಾ ।
ಅಶ್ವತ್ಥಮೇನಂ ಸುವಿರೂಢಮೂಲಮ್
ಅಸಂಗಶಸ್ತ್ರೇಣ ಧೃಢೇನ ಛಿತ್ವಾ ॥ ೩ ॥

ತತಃ ಪದಂ ತತ್ಪರಿಮಾರ್ಗಿತವ್ಯಮ್
ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ
ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥ ೪ ॥


ನಿರ್ಮಾನ ಮೋಹಾ ಜಿತಸಂಗದೋಷಾಃ
ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖ ಸಂಜ್ಞೈಃ
ಗಚ್ಛಂತ್ಯಮೂಢಾಃ ಪದಮವ್ಯಯಂ ತತ್ ॥ ೫ ॥

ನ ತದ್ಭಾಸಯತೇ ಸೂರ್ಯೋ
ನ ಶಶಾಂಕೋ ನ ಪಾವಕಃ ।
ಯದ್ಗತ್ವಾನ ನಿವರ್ತಂತೇ
ತದ್ಧಾಮ ಪರಮಂ ಮಮ ॥ ೬ ॥


ಮಮೈವಾಂಶೋ ಜೀವಲೋಕೇ
ಜೀವಭೂತಸ್ಸನಾತನಃ ।
ಮನಷ್ಷಷ್ಠಾನೀಂದ್ರೀಯಾಣಿ
ಪ್ರಕೃತಿಸ್ಥಾನಿ ಕರ್ಷತಿ ॥ ೭ ॥

ಶರೀರಂ ಯದವಾಪ್ನೋತಿ
ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ
ವಾಯುರ್ಗಂಧಾನಿವಾಶಯಾತ್ ॥ ೮ ॥


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

## ಹಿರಿಯ ನಾಗರಿಕರ ಸಂಸ್ಥೆಗೆ ಆಯ್ಕೆ



ಉಡುಪಿಯ ಹಿರಿಯ ನಾಗರಿಕರ ಸಂಸ್ಥೆಯ ನೂತನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಶ್ರೀ ಸಿ.ಎಸ್.ರಾವ್ ಆಯ್ಕೆಯಾಗಿದ್ದಾರೆ. ಇವರು ನಮ್ಮ ಸಂಘದ ಗೌರವ ಸಲಹೆಗಾರರು ಹಾಗೂ ಮಾಜಿ ಅಧ್ಯಕ್ಷರು. ಇವರೊಂದಿಗೆ ನಮ್ಮ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾವ್ ಇವರು ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

## ಸಂಗೀತದಲ್ಲಿ ಸಾಧನೆ



ಕರ್ನಾಟಕ ಸರಕಾರದ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಶಾಸ್ತ್ರೀಯ ಸಂಗೀತ ಜೂನಿಯರ್ ವಿಭಾಗದಲ್ಲಿ ಕುಮಾರಿ ಸ್ಮೃತಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಈಕೆ ಚೆನ್ನೈಯ ಶ್ವೇತ ಹಾಗೂ ನಾಗೇಶ್ ಬಾಬು ದಂಪತಿಗಳ ಪುತ್ರಿ. ಈಕೆ ಕಾಸರಗೋಡಿನ ವಿದುಷಿ ರಾಧಾ ಮುರಳೀಧರರ ಶಿಷ್ಯೆ ಹಾಗೂ ಮೊಮ್ಮಗಳು

## ಪಡುಬಿದ್ರೆಯಲ್ಲಿ ಸೋಣಾರತಿ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾ.17.08.2018ರಿಂದ ತಾ.17.09.2018ರ ತನಕ ಪ್ರತೀ ದಿನ ಸೋಣಾರತಿ ಪೂಜೆ ನೆರವೇರಿತು. ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪಡುಬಿದ್ರೆಯ ಸಮಾಜಬಾಂಧವರು ಹಾಗೂ ಭಕ್ತಾದಿಗಳ ಸಹಕಾರದಿಂದ ವಿಜೃಂಭಣೆಯಾಗಿ ನೆರವೇರಿತು. ಆಡಳಿತ ಮೊಕ್ತೇಸರರಾದ ಶ್ರೀ ಜಯರಾಮರಾಯರು ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದ್ದಾರೆ.

## ಶ್ರೀ ವೈ. ಸೀತಾರಾಮ ರಾವ್



ಎಲ್ಲೂರು ಹಾಲು ಉತ್ಪಾದಕರ ಸಂಘ (ನಿ.) ಎಲ್ಲೂರು ಇದರ ನೂತನ ಅಧ್ಯಕ್ಷರಾಗಿ ಕಾಶೀ ಸಂತಾನದ ಶ್ರೀ. ವೈ. ಸೀತಾರಾಮರಾವ್ ರವರು ಸತತ 3ನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಇವರ ಅಧ್ಯಕ್ಷತೆಯ ಅವಧಿ 5 ವರ್ಷ. ಶ್ರೀಯುತರಿಗೆ ಎಲ್ಲೂರಿನ ಸಮಾಜಬಾಂಧವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಸುಮನಾ ಪ್ರಶಾಂತ್‌ರವರ ಸಂಗೀತ ಕಛೇರಿ



ಕಾಣಿಯೂರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀ ಪಾದಂಗಳವರ ಚಾತುರ್ಮಾಸ್ಯದ ಅಂಗವಾಗಿ ಶ್ರೀ ವಿಷ್ಣುಮೂರ್ತಿ ಅನ್ನಪೂರ್ಣೇಶ್ವರಿ ಕ್ಷೇತ್ರ ಸಂಪ್ಪದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪುತ್ತೂರಿನ ಶ್ರೀಮತಿ ಸುಮನಾ ಪ್ರಶಾಂತ್ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಇವರಿಗೆ ಪಕ್ಕವಾದ್ಯ ವಯಲಿನ್‌ನಲ್ಲಿ ಜಗದೀಶ್ ಕೊರೆಕ್ಕಾನ ಹಾಗೂ ಮೃದಂಗದಲ್ಲಿ ಅಮೃತನಾರಾಯಣ ಸಹಕರಿಸಿದರು.

**ಕವನ**

### ಹುಲಿ ಸವಾರಿ

ಹುಲಿ ಸವಾರಿ, ಹುಲಿ ಸವಾರಿ
ಮಾಡುತ್ತಿದ್ದೇವೆ ನಾವೆಲ್ಲರೂ
ಹುಲಿ ಸವಾರಿ, ಹುಲಿ ಸವಾರಿ
ಹತ್ತಿಯೇನೊ ಕುಳಿತು ಬಿಟ್ಟೆವು
ಭಯಂಕರ ಪ್ರಾಣಿಯ ಬೆನ್ನಿನಲ್ಲಿ
ಇಳಿಯಲಾರೆವು ಎಂದೂ ಈಗ
ಉಳಿಯಲಾರೆವು ಒಬ್ಬರೂ ನಮ್ಮಲ್ಲಿ
ನಿಲ್ಲುವಂತಿಲ್ಲ ಎಲ್ಲಿಯೂ
ಇಳಿದರೆ ತಿನ್ನುವುದು ಹುಲಿಯೂ
ನಾವೆಲ್ಲರೂ ಒಮ್ಮೆಲೇ ಬಲಿಯೂ

ವ್ಯಾಪಾರ, ವಹಿವಾಟು, ಲಾಭ
ದೇಶ, ವಿದೇಶ, ಲೋಕ, ಲೋಭ
ಏರುತ್ತೇರುತ್ತ ಎತ್ತರ
ತಳದ ಬದುಕದು ದುಸ್ತರ
ಗಿರಿ, ಗಿರಿ, ಗಿರಿ, ಗಿರಿ, ಗಿರಿ
ನಾವು ಸುತ್ತುತ್ತಿರುವ ಪರಿ
ಸಾಗುತ್ತಲೇ ಬಸವಳಿದಿರುವೆವು
ಜಾಗತೀಕರಣದ ಮಾಯಾಜಾಲದ ಹುಲಿ ಸವಾರಿಗೆ
ಹುಲಿ ಸವಾರಿ, ಹುಲಿ ಸವಾರಿ

– ಮಲ್ಲಿಕ್ ಉಳಿಯಾರು

## ಉಡುಪಿ ಸಂಘದಲ್ಲಿ ವೇದಿಕೆಗಳ ರಚನೆ

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯಲ್ಲಿ ನೂತನ ಆಡಳಿತ ಮಂಡಳಿಯು ಸಭೆ ಸೇರಿ ಸಂಘದ ವಿವಿಧ ಚಟುವಟಿಕೆಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಆಯಾ ಕ್ಷೇತ್ರಗಳಲ್ಲಿ ಪರಿಣಿತರಾದ ನಮ್ಮ ಸಮಾಜಬಾಂಧವರನ್ನು ಸೇರಿಸಿ ವಿವಿಧ ವೇದಿಕೆಗಳನ್ನು ರಚಿಸಿತು. ಸಂಘದಲ್ಲಿ ಈಗಾಗಲೇ ಯುವವೇದಿಕೆ, ಮಹಿಳಾವೇದಿಕೆ, ಶ್ರೀ ಶಾರದಾ ವೇದಿಕೆ, ಕಲೆ ಹಾಗೂ ಸಾಂಸ್ಕೃತಿಕ ವೇದಿಕೆ, ದೇವಸ್ಥಾನ ವೇದಿಕೆ, ವಿದ್ಯಾರ್ಥಿವೇತನ ವೇದಿಕೆ, ಆಂತರಿಕ ಲೆಕ್ಕಪರಿಶೋಧಕ ವೇದಿಕೆ, ವೈದ್ಯಕೀಯ ನೆರವು ವೇದಿಕೆಗಳು ಇದ್ದು ಊಟೋಪಚಾರ ವೇದಿಕೆಯನ್ನು ಹೊಸದಾಗಿ ಸೇರಿಸಲಾಯಿತು

**ವೇದಿಕೆಗಳ ವಿವರ ಹೀಗಿದೆ**

**ಶ್ರೀ ಶಾರದಾ ವೇದಿಕೆ :**
ಡಾ। ವೈ. ಸುದರ್ಶನ ರಾವ್ (ಅಧ್ಯಕ್ಷರು), ಶ್ರೀ ಬಿ.ಸುರೇಶ ಶ್ಯಾನುಭಾಗ್ (ಸಂಚಾಲಕರು) ಶ್ರೀ ವೈ. ಭುವನೇಂದ್ರ ರಾವ್ (ಸದಸ್ಯರು), ಶ್ರೀ ಟಿ.ಸುರೇಶ ರಾವ್ ನಿಟ್ಟೂರು (ಸದಸ್ಯರು), ಶ್ರೀ ಪಿ. ಪ್ರಭಾಕರ ಭಂಡಿ (ಸದಸ್ಯರು)

**ದೇವಸ್ಥಾನ ವೇದಿಕೆ :**
ಶ್ರೀ ಕುತ್ಪಾಡಿ ಸುರೇಶ ರಾವ್ (ಅಧ್ಯಕ್ಷರು) ಶ್ರೀ ಜಿ.ಕೆ ಕೋಲ್ಪೆ (ಸಂಚಾಲಕರು), ಶ್ರೀಮತಿ ಉಷಾಮೋಹನ್‌ದೇವ್(ಸದಸ್ಯರು), ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್ (ಸದಸ್ಯರು), ಶ್ರೀಮತಿ ವೀಣಾ ಜಯರಾಮ ರಾವ್ (ಸದಸ್ಯರು), ಶ್ರೀಮತಿ ಜ್ಯೋತಿ ಸುಧಾಕರ ರಾವ್ (ಸದಸ್ಯರು)

**ವಿದ್ಯಾರ್ಥಿ ವೇತನ ಶಿಕ್ಷಣ ಮತ್ತು ತರಬೇತಿ ವೇದಿಕೆ :**
ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು (ಅಧ್ಯಕ್ಷರು), ಡಾ। ವೈ.ರವೀಂದ್ರನಾಥ ರಾವ್ (ಸಂಚಾಲಕರು), ಶ್ರೀ ವೈ. ಪ್ರಕಾಶ ಕುಮಾರ್ (ಸದಸ್ಯರು), ಶ್ರೀ ಬಿ.ಕೃಷ್ಣಮೂರ್ತಿ ರಾವ್ ಅಂಬಲ್ಪಾಡಿ (ಸದಸ್ಯರು), ಶ್ರೀ ಹೆಚ್. ನಿರಂಜನ ರಾವ್ (ಸದಸ್ಯರು), ಶ್ರೀ ಪ್ರಕಾಶ್ ಕೋಲ್ಪೆ (ಸದಸ್ಯರು)

**ಯುವ ಮತ್ತು ಕ್ರೀಡಾ ವೇದಿಕೆ :**
ಡಾ। ಸಂತೋಷ್ ರಾವ್, ಪದ್ಮನಾಭ ನಗರ ಚಿಟ್ಪಾಡಿ (ಅಧ್ಯಕ್ಷರು), ಶ್ರೀ ವಿಶ್ವನಾಥ ಶ್ಯಾನುಭಾಗ್ (ಸಂಚಾಲಕರು), ಶ್ರೀ ವೈ. ಪ್ರಸಾದಕುಮಾರ್ (ಸದಸ್ಯರು), ಶ್ರೀ ಕೃಷ್ಣರಾಜ ರಾವ್ ಉಂಡಾರು (ಸದಸ್ಯರು), ಶ್ರೀ ವಿವೇಕ್ ರಾವ್ (ಸದಸ್ಯರು), ಶ್ರೀ ವಾಗೀಶ ರಾವ್ ನಿಟ್ಟೂರು (ಸದಸ್ಯರು), ಶ್ರೀ ವಾಗೀಶ ರಾವ್ ಕಲ್ಮಂಜೆ (ಸದಸ್ಯರು)

**ಮಹಿಳಾ ವೇದಿಕೆ :**
ಶ್ರೀಮತಿ ಪೂರ್ಣಿಮಾ ಪಿ.ರಾವ್(ಅಧ್ಯಕ್ಷರು) ಶ್ರೀಮತಿ ಪ್ರೀತಿ ಮಾಲಾ (ಸಂಚಾಲಕರು), ಶ್ರೀಮತಿ ಉಷಾ ಶ್ಯಾನುಭಾಗ್ (ಸದಸ್ಯರು), ಶ್ರೀಮತಿ ವಿದ್ಯಾ ಎಸ್.ರಾವ್ (ಸದಸ್ಯರು), ಶ್ರೀಮತಿ ಸಂಧ್ಯಾ ರಾವ್ (ಸದಸ್ಯರು), ಶ್ರೀಮತಿ ರಜನಿ ಹೆಬ್ಬಾರ್ (ಸದಸ್ಯರು), ಶ್ರೀಮತಿ ಗೀತಾ ಕೃಷ್ಣಕುಮಾರ್ (ಸದಸ್ಯರು), ಶ್ರೀಮತಿ ಜ್ಯೋತಿ ಸಂತೋಷ ರಾವ್ (ಸದಸ್ಯರು)

**ಕಲೆ ಮತ್ತು ಸಾಂಸ್ಕೃತಿಕ ವೇದಿಕೆ :**
ಶ್ರೀ ಮಧುಸೂದನ್ ರಾವ್ (ಅಧ್ಯಕ್ಷರು), ಶ್ರೀ ಬಿ.ಕೃಷ್ಣಮೂರ್ತಿ ರಾವ್ ಬ್ರಹ್ಮಾವರ (ಸಂಚಾಲಕರು), ಶ್ರೀ ಹೆಚ್. ಮಲ್ಲಿಕಾರ್ಜುನ ರಾವ್ (ಸದಸ್ಯರು), ಶ್ರೀ ಪ್ರವೀಣ ಕುಮಾರ್ (ಸದಸ್ಯರು) ಶ್ರೀ ಚಂದ್ರಕಾಂತ ರಾವ್, ಮೂಡುಬೆಳ್ಳೆ (ಸದಸ್ಯರು)

**ವೈದ್ಯಕೀಯ ವೇದಿಕೆ :**
ಡಾ। ಸನತ್ ರಾವ್ (ಅಧ್ಯಕ್ಷರು), ಡಾ। ರಮೇಶ ರಾವ್ (ಸಂಚಾಲಕರು), ಶ್ರೀ ಕೆ.ಚಂದ್ರಶೇಖರ ರಾವ್ ಲಕ್ಷ್ಮೀಂದ್ರನಗರ (ಸದಸ್ಯರು)

**ಊಟೋಪಚಾರ ವೇದಿಕೆ :**
ಶ್ರೀ ಟಿ. ಜಗದೀಶ ರಾವ್ (ಅಧ್ಯಕ್ಷರು), ಶ್ರೀ ಎಮ್.ಅಶೋಕ ರಾವ್, ಕಟ್ಪಾಡಿ (ಸಂಚಾಲಕರು), ಶ್ರೀ ಎ. ಭಾಗ್ಯಚಂದ್ರ ರಾವ್ (ಸದಸ್ಯರು), ಶ್ರೀ ಬಿ. ಹರಿಶ್ಚಂದ್ರ ರಾವ್ (ಸದಸ್ಯರು), ಶ್ರೀ ಚಿಟ್ಪಾಡಿ ಸಂತೋಷ್ ರಾವ್ (ಸದಸ್ಯರು), ಶ್ರೀ ದಿವಾಕರ ರಾವ್ ಚೊಕ್ಕಾಡಿ (ಸದಸ್ಯರು)

**ಆಂತರಿಕ ಲೆಕ್ಕ ಪರಿಶೋಧನಾ ವೇದಿಕೆ :**
ಶ್ರೀ ಐ.ಕೆ. ಜಯಚಂದ್ರ ರಾವ್ (ಅಧ್ಯಕ್ಷರು) ಶ್ರೀ ಪದ್ಮನಾಭ ಹೆಬ್ಬಾರ್ (ಸಂಚಾಲಕರು) ಶ್ರೀ ಕೆ. ವೇಣುಗೋಪಾಲ ರಾವ್ (ಸದಸ್ಯರು)

**ಗೌರವ ಸಲಹೆಗಾರರು :**
ಡಾ। ಪಿ.ವಿಠಲ ರಾವ್, ಶ್ರೀ ಎಂ.ಪಾಲಚಂದ್ರ ರಾವ್, ಶ್ರೀ ರಮೇಶ್ ಶ್ಯಾನುಭಾಗ್ ಸತಾರ, ಶ್ರೀ ಸಿ.ಎಸ್.ರಾವ್, ಶ್ರೀ ಯು. ಪ್ರಫುಲ್ಲಚಂದ್ರ ರಾವ್, ಶ್ರೀ ವೈ. ಭುವನೇಂದ್ರ ರಾವ್, ಶ್ರೀ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಶ್ರೀ ಬಿ. ವಾಸುದೇವ ರಾವ್

## ಕಡಿಯಾಳಿ ಗಣೇಶೋತ್ಸವದಲ್ಲಿ ಸಮಾಜಬಾಂಧವರ ಕೊಡುಗೆ

ಉಡುಪಿ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ (ರಿ.) ಕಡಿಯಾಳಿಯವರಿಂದ ಆಚರಿಸಲ್ಪಟ್ಟ 52ನೇ ಗಣೇಶೋತ್ಸವದಲ್ಲಿ ತಾ.12.09.2018 ರಂದು ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಉಡುಪಿ ಶಾಸಕ ಶ್ರೀ ರಘುಪತಿ ಭಟ್ ಹಾಗೂ ಕೋಟ ಶ್ರೀನಿವಾಸ ಪೂಜಾರಿ ( ವಿಧಾನ ಪರಿಷತ್ ವಿಪಕ್ಷ ನಾಯಕರು) ಉಪಸ್ಥಿತಿಯಲ್ಲಿ ಉಡುಪಿ ನಗರಸಭೆಗೆ ಸದಸ್ಯರಾಗಿ ಚುನಾಯಿತರಾದ ಶ್ರೀಮತಿ ರಜನಿ ಮಂಜುನಾಥ ಹೆಬ್ಬಾರರನ್ನು ಗೌರವಿಸಲಾಯಿತು. ಶ್ರೀ ಗಣೇಶೋತ್ಸವ ದೇವತಾ ಕಾರ್ಯಗಳಲ್ಲಿ ಶ್ರೀ ಜೆ.ಕೆ. ಕೋಲ್ಪೆಯವರು ಸಹಕರಿಸಿದ್ದು, ಸಮಿತಿಯವರಿಂದ ಗೌರವಿಸಲ್ಪಟ್ಟರು. ಕಾರ್ಯಕಾರಿ ಮಂಡಳಿಯಲ್ಲಿ ಅನ್ನಸಂತರ್ಪಣೆ ಮತ್ತು ಉಪಹಾರ ಸಮಿತಿಯಲ್ಲಿ ನಮ್ಮ ಅಧ್ಯಕ್ಷರಾದ ಮಂಜುನಾಥ ಹೆಬ್ಬಾರರು ಕಾರ್ಯನಿರ್ವಹಿಸಿದರು. ಶ್ರೀಶಾರದಾ ಭಜನಾ ಮಂಡಳಿಯಿಂದ ಒಂದು ದಿನದ ಭಜನಾ ಸೇವೆ ನೆರವೇರಿತು.



# ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಿಂದ ವಿವಿಧ ಕಾರ್ಯಕ್ರಮಗಳು

**ಅಷ್ಟಮಿ ಆಚರಣೆ :**



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 16.09.2018 ನೇ ರವಿವಾರದಂದು ಶ್ರೀ ಕೃಷ್ಣಜನ್ಮಾಷ್ಟಮಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಮೊದಲಿಗೆ ವಿಷ್ಣುಸಹಸ್ರನಾಮ, ಶಂಕರ ಅಷ್ಟೋತ್ತರ ಪಾರಾಯಣ ನಡೆದವು. ನಂತರ ಭಗವದ್ಗೀತೆ ಸ್ಪರ್ಧೆಯು ಎರಡು ವಿಭಾಗದಲ್ಲಿ ನಡೆದವು. ಮಕ್ಕಳು ತನ್ಮಯತೆ ಹಾಗೂ ಭಕ್ತಿ ಪೂರ್ವಕವಾಗಿ ಕಂಠ ಪಾಠ ಶ್ಲೋಕಗಳನ್ನು ಪಠಿಸಿ ಉತ್ಸಾಹದಿಂದ ಭಾಗವಹಿಸಿದರು. ಶ್ರೀ ಕೃಷ್ಣ ವೇಷ ಸ್ಪರ್ಧೆಯು ಮೂರು ವಿಭಾಗದಲ್ಲಿ ನಡೆದವು. ಸಮಾಜದ ಪುಟಾಣಿಗಳು ವೇಷ ಭೂಷಣಗಳೊಂದಿಗೆ, ಅದ್ಭುತವಾಗಿ, ವಿವಿಧ ರೀತಿಯಲ್ಲಿ ನಟಿಸಿದರು. ಭಕ್ತಿ ಗೀತೆ ಸ್ಪರ್ಧೆಯು ಸ್ಪರ್ಧಾತ್ಮಕವಾಗಿ ನಡೆದು ಭಕ್ತಿರಸ ಲೋಕವನ್ನು ಸೃಷ್ಟಿಸಿತು. ಹೊರ ಆವರಣದಲ್ಲಿ ನಡೆದ ಮಡಕೆ ಒಡೆಯುವ ಮಕ್ಕಳ ವಿಭಾಗದ ಸ್ಪರ್ಧೆ ಶೀಘ್ರವಾಗಿ ಮುಗಿದರೆ ಹಿರಿಯರ ವಿಭಾಗದ ಸ್ಪರ್ಧೆಯಲ್ಲಿ ಮಡಕೆ ಒಡೆಯಲು ಹರಸಾಹಸ ಪಟ್ಟರು. ಭೋಜನದ ನಂತರ ಶಂಖನಾದ ಸ್ಪರ್ಧೆಯಲ್ಲಿ ಸದಸ್ಯರ ಕೌಶಲ್ಯ ಎಲ್ಲರನ್ನು ಬೆರಗುಗೊಳಿಸಿತು. ಶ್ರೀ ಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ಶ್ರೀ ಸಂಜಯ್ ಕುಮಾರ್ ಪಲಿಮಾರ್ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಲವು ವೈಯಕ್ತಿಕ, ಸಮೂಹ ನೃತ್ಯಗಳು, ಸಾಮೂಹಿಕ ಗಾಯನಗಳು ನಡೆದವು. ಮಹಿಳಾ ಸಮೂಹ ನೃತ್ಯ ಹಾಗೂ ಪುರುಷ ಸಮೂಹ ನೃತ್ಯಗಳು ಶ್ರೀಮತಿ ಅನುರಾಧ ಕೆ.ರಾವ್ ರವರ ನಿರ್ದೇಶನದಲ್ಲಿ ನಡೆದು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀಮತಿ ಮಂಜುಳಾ ಮುರಳಿಧರ್, ಶ್ರೀಮತಿ ಶ್ರೀಲತಾ ಜಯಪ್ರಕಾಶ್, ಶ್ರೀ ಸಂಜಯ್ ಕುಮಾರ್ ಪಲಿಮಾರ್, ಶ್ರೀ ಅನಿಲ್.ಎನ್, ಶ್ರೀಮತಿ ಕ್ಷಮ ಹರಿ ನಾರಾಯಣ್, ಶ್ರೀಮತಿ ಶಾರದಾ ಪ್ರಸಾದ್, ಶ್ರೀಮತಿ ಸ್ನೇಹಲತಾ ದಿವಾಕರ್ ತೀರ್ಪುಗಾರರಾಗಿ ಸಹಕರಿಸಿದರು. ಯುವ ವೇದಿಕೆಯ ಶ್ರೀ ಮನೀಶ್ ರಾವ್ ಶ್ರೀ ಅನಿಲ್ ಎನ್., ಶ್ರೀ ಸುರೇಶ್ ಕಡಬ ಮಹಿಳಾ ವೇದಿಕೆಯ ಶ್ರೀ ಶೈಲಜ ಶ್ರೀಕಾಂತ್, ಡಾ ಜಯಲಕ್ಷ್ಮೀ, ಶ್ರೀಮತಿ ಕುಸುಮಾ ನವೀನ್ ಕುಮಾರ್ ವ್ಯವಸ್ಥೆಗಳಲ್ಲಿ ಸಹಕರಿಸಿದರೆ ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಧನ್ಯವಾದ ಸಮರ್ಪಣೆ, ರಾಷ್ಟ್ರ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಶೃಂಗೇರಿ ಯಾತ್ರೆ :**



ತಾ.09.09.2018 ರಂದು ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿದಾನಂಗಳವರು ಹಾಗೂ ಶ್ರೀ ಶ್ರೀ ವಿದುಶೇಖರ ಭಾರತೀ ತೀರ್ಥ ಸನ್ನಿದಾನಂಗಳರವರ ಚಾತುರ್ಮಾಸ ಪ್ರಯುಕ್ತ ಶೃಂಗೇರಿ ಯಾತ್ರೆ ನಡೆಸಲಾಯಿತು ಸುಮಾರು 80ಕ್ಕೂ ಹೆಚ್ಚು ಭಕ್ತರು ಹೊರೆ ಕಾಣಿಕೆ ಸಮರ್ಪಿಸಿ ಗುರುಗಳ ದರುಶನ , ಅನುಗ್ರಹ ಭಾಷಣ, ಫಲ ಮಂತ್ರಾಕ್ಷತೆ ಪಡೆದು ಕೃತಾರ್ಥರಾದರು.

**"ಗೇಮ್ಸ್ ರೂಂ" ನ ಉದ್ಘಾಟನೆ :**



ಶ್ರೀ ಸುಬ್ರಹ್ಮಣ್ಯ ಸಭಾದ 4ನೇ ಮಹಡಿಯಲ್ಲಿ ಯುವವೇದಿಕೆಯ ವತಿಯಿಂದ "ಗೇಮ್ಸ್ ರೂಂ" ನ್ನು ಎಮ್.ಸಿ.ಎಫ್.ನ ನಿರ್ದೇಶಕರಾದ ಶ್ರೀ ಕೆ. ಪ್ರಭಾಕರರಾವ್ ಉದ್ಘಾಟಿಸಿದರು. 'ಯುವ ಜನರಿಗೆ ಆಕರ್ಷಣೆಯ ವಿಷಯಗಳಾದ ಗೇಮ್ಸ್, ಜಿಮ್ ಗಳು ಇಂದಿನ ಅವಶ್ಯಕತೆಗಳಾಗಿದ್ದು ಯುವ ವೇದಿಕೆಯ ಆಶಯ ನಮ್ಮ ಸಮಾಜಕ್ಕೆ ಪ್ರೇರಣೆಯಾಗಿದೆ. ಯುವ ವೇದಿಕೆಯು ಇಂತಹ ಇನ್ನಷ್ಟು ಕಾರ್ಯಗಳನ್ನು ನಡೆಸಿ ಯಶಸ್ವಿಯಾಗಲಿ" ಎಂದು ಅವರು ಹಾರೈಸಿದರು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ। ಎ.ಪಿ ಕೃಷ್ಣ, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ ಶ್ರೀಕಾಂತರಾವ್, ಜತೆ ಕಾರ್ಯದರ್ಶಿಗಳಾದ ಶ್ರೀ ಚೇತನ್ ಶರ್ಮ, ಶ್ರೀ ಅನಿಲ್ ರಾವ್ ಬಿ.ಎಸ್. ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಯುವ ವೇದಿಕೆಯ ಅಧ್ಯಕ್ಷ ಶ್ರೀ ಮನೀಶ್ ರಾವ್ ಉಪಾಧ್ಯಕ್ಷ ಶ್ರೀ ಅನಿಲ್ ಎನ್. ಕಾರ್ಯಕ್ರಮ ಸಂಯೋಜಿಸಿದರು. ಜಿಮ್‌ನ ಪರಿಕರಗಳ ಪ್ರಾಯೋಜಕರಾದ ಶ್ರೀ ಆಕಾಶ್ ಬೆಳ್ಳೆಯವರಿಗೆ ಧನ್ಯವಾದ ಅರ್ಪಿಸಲಾಯಿತು.

**ಚಿತ್ರಗಳು : ರಘುವೀರ್ ಪೆರ್ಡೂರು**

## ಶ್ರೀ ಮ.ನಾ. ಹೆಬ್ಬಾರರಿಗೆ ಹುಟ್ಟೂರ ಸಮ್ಮಾನ



ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಬೆಳ್ವೆ ವಲಯದ ವಾರ್ಷಿಕ ಸಮಾವೇಶವು ದಿನಾಂಕ 22ರಂದು ಬೆಳ್ವೆ ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಜರಗಿತು. ಈ ಸಂದರ್ಭದಲ್ಲಿ ಬೆಳ್ವೆ ವಲಯದಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘದ ಮಾಜಿ ಅಧ್ಯಕ್ಷರ ನೆಲೆಯಲ್ಲಿ (7 ವರ್ಷ) ನಿವೃತ್ತ ಉಪನ್ಯಾಸಕರಾದ ಹರಿದಾಸ ಶ್ರೀ ಮ.ನಾ. ಹೆಬ್ಬಾರರನ್ನು ಶಾಲು, ಹಾರ, ನೆನಪಿನ ಕಾಣಿಕೆಗಳನ್ನಿತ್ತು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ನಮ್ಮ ಸಮಾಜದವರಾಗಿದ್ದು, ಹಾಲು ಉತ್ಪಾದಕರ ಸಹಕಾರಿ ಸಂಘದ ಮಾಜಿ ಅಧ್ಯಕ್ಷರುಗಳಾದ ಶ್ರೀ ಮರೂರು ಶ್ರೀಧರ ಹೆಬ್ಬಾರ್ ಮತ್ತು ಶ್ರೀಮತಿ ಸುಶೀಲಾ ಹೆಬ್ಬಾರ್, ತಾರಿಕಟ್ಟೆ ಇವರುಗಳನ್ನು ಸಮ್ಮಾನಿಸಲಾಯಿತು.

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಸ್ಕೇಟಿಂಗ್ ಪ್ರತಿಭೆ ಪ್ರಣಮ್ಯಾ



ಇನ್ನಾ ಕೆ. ಆನಂದ ರಾವ್ ಮತ್ತು ಶ್ರೀಮತಿ ಅನುರಾಧರವರ ಪುತ್ರ ಐ.ಕೆ.ಸಂತೋಷ್ ಮತ್ತು ಕದ್ರಿ ಹೆಚ್. ಕುಮಾರಸ್ವಾಮಿ ಮತ್ತು ಶ್ರೀಮತಿ ಪ್ರೇಮಾರವರ ಪುತ್ರಿ ಲಾವಣ್ಯ ದಂಪತಿಗಳ ಮಗಳು ಪ್ರಣಮ್ಯಾ. ಇವರು ಚೆನ್ನೈಯ ಸ್ಟೆಲ್ಲಾಮರಿಯಾಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಇಂದು ಅಂತಾರಾಷ್ಟ್ರೀಯ ಸ್ಕೇಟಿಂಗ್ ಪಟುವಾಗಿ ಹೊರಹೊಮ್ಮಿದ್ದಾರೆ. ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ನೂರೈವತ್ತಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗೆದ್ದಿದ್ದಾರೆ. ಇದುವರೆಗೆ 59 ಚಿನ್ನದ ಪದಕ, 23 ಬೆಳ್ಳಿಯ ಪದಕ ಹಾಗೂ 19 ಕಂಚಿನ ಪದಕ ಪಡೆದು ದಾಖಲೆ ನಿರ್ಮಿಸಿದ್ದಾರೆ. 2012ರಲ್ಲಿ ಚೀನಾದಲ್ಲಿ ನಡೆದ ಅಂತರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಸ್ಕೇಟಿಂಗ್ ಮತ್ತು ಜತೆ ನೃತ್ಯದಲ್ಲಿ ಬೆಳ್ಳಿ ಹಾಗೂ ಏಕನೃತ್ಯದಲ್ಲಿ ಕಂಚು ಗೆದ್ದಿದ್ದಾರೆ. ಹಾಗೆಯೇ ಚೀನಾದಲ್ಲಿ ಪುನಃ 2014 ಹಾಗೂ 2016ರಲ್ಲಿ ರೋಲರ್ ಸ್ಕೇಟಿಂಗ್‌ನಲ್ಲಿ ಕಂಚಿನ ಪದಕವನ್ನು ಗೆದ್ದಿದ್ದಾರೆ. ಮಗದೊಮ್ಮೆ ತೈವಾನ್‌ನಲ್ಲಿ ನಡೆದ ಆರ್ಟಿಸ್ಟಿಕ್ ರೋಲರ್ಸ್ ಸ್ಕೇಟಿಂಗ್‌ನಲ್ಲಿ ಎರಡು ಬೆಳ್ಳಿ ಹಾಗೂ ಒಂದು ಕಂಚಿನ ಪದಕವನ್ನು ಪಡೆದಿದ್ದಾರೆ. ಇತ್ತೀಚೆಗೆ ದಕ್ಷಿಣಕೊರಿಯಾದಲ್ಲಿ ನಡೆದ 18ನೇ ರೋಲರ್ ಸ್ಕೇಟಿಂಗ್ ಚ್ಯಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಹಾಗೂ ಕಂಚಿನ ಪದಕವನ್ನು ಪಡೆದಿರುತ್ತಾರೆ. ಇದು ಅವರು ಪಡೆದ ನೂರನೇ ಪದಕವಾಗಿರುವುದು ವಿಶೇಷ. ಸ್ಕೇಟಿಂಗ್ ಪ್ರತಿಭೆ ಪ್ರಣಮ್ಯಾರಿಗೆ ನಮ್ಮೆಲ್ಲರ ಅಭಿನಂದನೆಗಳು.

## ಶ್ರೀ ಮ.ನಾ.ಹೆಬ್ಬಾರರ ಧಾರ್ಮಿಕ ಉಪನ್ಯಾಸ

ಕಬ್ಬಿನಾಲೆ ಮೇಲುಮಠ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಜರಗಿದ ಸಾರ್ವಜನಿಕ ಶ್ರೀ ಗಣೇಶೋತ್ಸವದ ಎರಡನೇ ದಿನ ನಡೆದ ಸಭಾ ಕಾರ್ಯಕ್ರಮದಲ್ಲಿ ಹರಿದಾಸ ಶ್ರೀ ಮರೂರು ನಾರಾಯಣ ಹೆಬ್ಬಾರರು ಧಾರ್ಮಿಕಉಪನ್ಯಾಸ ನೀಡಿದರು. ಶ್ರೀ.ಕೆ ಶ್ರೀಧರ ಹೆಬ್ಬಾರ, ಕಜಿನೆ ಇವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ರಾಮಕೃಷ್ಣ ಹೆಬ್ಬಾರರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ನಾಗಭೂಷಣ ಹೆಬ್ಬಾರ್, ಶ್ರೀ.ಕೆ ವಾಸುದೇವ ಹೆಬ್ಬಾರ್, ಅರ್ಚಕರಾದ ಶ್ರೀ ಕೆ. ರಾಮಚಂದ್ರ ಭಟ್, ಶ್ರೀಮತಿ ವೀಣಾ ರಾಮಚಂದ್ರ ಭಟ್ ಮುಂತಾದವರು ವೇದಿಕೆಯಲ್ಲಿದ್ದರು. ಉಡುಪಿಯಿಂದ ವಿಶೇಷ ಅತಿಥಿಗಳಾಗಿ ಶ್ರೀ. ಎ. ಹರಿಕೃಷ್ಣ ರಾವ್, ಡಾ। ನಿರ್ಮಲಾ ಹರಿಕೃಷ್ಣ, ಮಾ। ಕಾರ್ತಿಕೇಯ ಕೃಷ್ಣ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ಶ್ರೀ ನಾಗಭೂಷಣ ಹೆಬ್ಬಾರ್‌ರವರು ಧನ್ಯವಾದವಿತ್ತರು.




ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಅಮೇರಿಕಾದಲ್ಲಿ ಶ್ರೀ ದೇವಾನಂದ ಭಟ್‌ರವರ ಯಕ್ಷದೇವ ಕಲಾಮಂಡಳಿ, ಬೆಳುವಾಯಿ














## ಹೀಗೊಂದು ಗುರುಶಿಷ್ಯ ಸಂವಾದ

–ಅಪಯಶ, ಬೆಂಗಳೂರು

(...ಹಿಂದಿನ ಸಂಚಿಕೆಯಿಂದ)

16) **ಗುರುವಿನ ಆಶ್ವಾಸನೆ :**
"ನಿಲ್ಲಿಸಯ್ಯ  ನಿನ್ನ ಕಂತೆ ಪುರಾಣಗಳನ್ನು
ಕೇಳಯ್ಯ ಕಿವಿಗೊಟ್ಟು, ಹೇಳುವ ಹಿತ ವಚನಗಳನ್ನು
ಇಂದು ನೀ ಉಣುತ್ತಿರುವ, ಕಷ್ಟಗಳ ಕಹಿಬೀಜವನು
ಈ ಹಿಂದೆಯೇ ಬಿತ್ತಿರುವೆ, ನೀರೆರೆದು ನೀನೇ ಬೆಳೆಸಿರುವೆ !

17) ಅಂದು ಬಿತ್ತಿದ ಬೆಳೆಯಿಂದು, ಹುಲುಸಾದ ಫಲ ನೀಡುತಿದೆ.
ತಿಂದು ಮುಗಿಸಲೆಬೇಕುಯೆಂದೇ ನಿನ್ನ ಕಾಡುತಿದೆ
ಬಂಧಿಸಿದೆ ನಿನ್ನ ಕರ್ಮಫಲ, ಬಿಡುಗಡೆಯೇ ಇರದಂತೆ
ಇಂದಿನ ಜನ್ಮದಲೆ ಮುಗಿಸು, ಮುಂದಿನ ಜನ್ಮ ಮುದಗೊಳಿಸು.

18) ಧರ್ಮ ಸೂಕ್ಷ್ಮತೆಯನ್ನು , ಸಾರುವ ನಮ್ಮ ಸನಾತನದ
ಕರ್ಮಸಿದ್ಧಾಂತದ ಮರ್ಮ, ತಿಳಿಯಲು ಸರಳವಾಗಿಹುದು
"ಏನು ಬಿತ್ತುವೆಯಾ ನೀನು, ಅದೇ ಬೆಳೆಯ ಪಡೆಯುವೆಯ"
ಬೇವಿನ ಮರವ ಬೆಳೆದಿರುವೆ, ಮಾವಿನಹಣ್ಣು ಬಯಸುವೆಯ?

19) ಹಿಂದಿನ ಜನ್ಮದಲಿ ಗೈದು, ತಿಂದುಳಿದ ಕರ್ಮದ ಫಲ
ಇಂದಿನ ಜನ್ಮದಲಿ ಉಣಿಸುವುದು, " ಪ್ರಾರಬ್ಧ ಫಲವು"
ಇಂದಿನ ಜನ್ಮದಲಿ ಗೈದ, ಸಂಚಯಿತ ಕರ್ಮ ಫಲ
ತಿಂದುಳಿದು ಕಾಯುತಿದೆ, ಆಗಾಮಿ ಕರ್ಮ ಫಲವು

20) ಏಕೈಕ ಬ್ರಹ್ಮವು ತಾನು, ತನ್ನ ಮಾಯೆಯ ಬಲದಿ
ಸಕಲವನು ಸೃಷ್ಟಿಸಿದೆ, ವಿವಿಧತೆಯನ್ನು ತೋರುತಿದೆ.
ದೇಶ ಕಾಲಗಳನ್ನು, ಜೀವ ಜಡ ವಸ್ತುಗಳನ್ನು
ಆಕಾಶ ನೀಹಾರಿಕೆಗಳನು, ಚೈತನ್ಯವನು ಸೃಷ್ಟಿಸಿದೆ.

21) ಪರಬ್ರಹ್ಮ ವಸ್ತುವು ತಾನು, ತನ್ನದೇ ಸೃಷ್ಟಿಯಲಿ
ತಾನಗೋಚರವಾಗಿ, ಸರ್ವತ್ರ ವ್ಯಾಪಿಸಿದೆ.
ಸಕಲ ಜೀವಿಗಳ ಜೀವ, ತಾನೇ ತಾನಾಗಿದ್ದರೂ
ಅವಿಚ್ಛನ್ನತೆಯನ್ನು, ಅಭಿನ್ನತೆಯನ್ನು, ಏಕತೆಯನ್ನು ಸಾರುತ್ತಿದೆ.

22) ಜೀವಿಗಳ ದೇಹದಲಿ, ಪರಮಾತ್ಮನೇ ನೆಲೆಸಿದ್ದರೂ
ವ್ಯಾವಹಾರಿಕವಾಗಿ 'ಜೀವಾತ್ಮ'ನೆಂದೆನಿಸಿಹನು
ಅವಿದ್ಯೆ, ಅಜ್ಞಾನಗಳ, ಫಲವಾಗಿ ಜೀವಿಯು ತಾನು
ಅದುವೇ 'ನಾನಾಗಿರುವೆ', ಎನ್ನುವುದ ತಿಳಿಯದಿಹನು

23) ಮನಸೇಂದ್ರಿಯಾದಿಗಳನ್ನು, ಕರಣಗಳ ನಿಯಂತ್ರಣವನ್ನು
ಜಪತಪಾದಿಗಳಿಂದ, ಯೋಗ ಧ್ಯಾನಗಳಿಂದ
ಶಮ ದಮಾದಿಗಳಿಂದ, ಶ್ರವಣ ಮನನಗಳಿಂದ
ಛಲದಿಂದ ಸಾಧಿಸಲು, 'ಬ್ರಹ್ಮ ಜ್ಞಾನ' ವೊದಗುವುದು

24) 'ನಾನ್ಯಾರು' ಎನ್ನುವುದನ್ನು ನೀನೇ ನಿನಗೆ ಪರಿಚಯಿಸು,
ನಾನು ನನ್ನದು, ಎನುವ, ಮಮಕಾರಗಳ ಪರಿತ್ಯಜಿಸು
'ನಾನು ಮಾಡಿದೆ' ನೆಂಬ ಭ್ರಮೆ ಹರಿದು, 'ಅರಿವು' ಬಂದಾಗ
'ಕರ್ಮಫಲ' ಬಂಧನ ಕಳಚಿ, 'ಮೋಕ್ಷ' ದ ದಾರಿ ತೋರುವುದು.

25) ಬ್ರಹ್ಮಸೂತ್ರಾದಿಗಳು, ಗೀತೋಪನಿಷತ್ತುಗಳು
ಪ್ರಸ್ಥಾನ ತ್ರಯಗಳು ಯೆಂದೇ, ಪ್ರಸಿದ್ಧವಾಗಿಹವು
ಜ್ಞಾನ ದೀಪವ ಬೀರಿ, ಮುಕ್ತಿ ಪಥವನು ತೋರಿ
ಸಾಧಕಗೆ ಶಾಶ್ವತದ, ಮೋಕ್ಷ ಪದವೀಯುವವು

26) ಜನನ ಮರಣಗಳಿಗೆಲ್ಲ, ಕರ್ಮವೆ ಕಾರಣವು
ಧರ್ಮಕರ್ಮಗಳ ಕಾರ್ಯ, ನಡೆಯಲೆಂದೇ ಪ್ರಪಂಚದ ಇರವು
ನಿಷ್ಕಾಮ ಕರ್ಮಗಳಿಂದ, ಫಲದ ಬಂಧನವಿರದು
ಬಂಧನವ ಕಳಚುವುದೇ, ಮೋಕ್ಷವೆನ್ನುವುದು

27) ಮುಂದಿನ ಜನ್ಮ ಸಿದ್ಧತೆಯ, ಈಗಲೇ ಮಾಡಿಕೊಳ್ಳೋ ಜಾಣ
ಇಂದಿನಿಂದಲೆ ಮಾಡು, ಪರಮಾತ್ಮನೊಲಿಸುವ ಧ್ಯಾನ
ಕಾಮ ಕ್ರೋಧ ಲೋಭ, ಮದಮೋಹ, ಮತ್ಸರವೆಂಬ
ಜೀವನವೆಲ್ಲ ನಿನ್ನೊಡನಿದ್ದ, ಶತ್ರುಗಳ ಸಹವಾಸ ಬಿಡು

28) ಅಪಯಶನೇ ಬಿಡುಚಿಂತೆಯನು, 'ಬ್ರಹ್ಮದ' ಚಿಂತನೆಯ ಮಾಡು
ಸರಳ ಜೀವನ ನಡೆಸಿ, ಮೋಕ್ಷ ಸಾಧನೆ ಮಾಡು
ಜ್ಞಾನ ಕರುಣಿಸುಯೆಂದು, ಜ್ಞಾನ ಶಕ್ತಿಯನು ಬೇಡು
ಜ್ಞಾನ ಕರುಣಿಸುಯೆಂದು, ಜ್ಞಾನಶಕ್ತಿಯ ಬೇಡು ಭಕ್ತಿಯಲಿ

॥ ಓಂ ನಮೋ ಶ್ರೀ ಜ್ಞಾನಶಕ್ತಿ ಶ್ರೀ ಸುಬ್ರಹ್ಮಣ್ಯೇಶ್ವರ ॥

(ಮುಗಿಯಿತು)


**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ**

ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ

ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

**ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ**

ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363


## ಮದ್ದಳೆಯ ಮೋಡಿಗಾರ ಕೆಮ್ಮಣ್ಣು ನಾರಣಪ್ಪಯ್ಯ

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕು ನಿಟ್ಟೆ ಕೆಮ್ಮಣ್ಣು ಮನೆಯಲ್ಲಿ 31.03.1896 ರಂದು ಜನಿಸಿದ ಒಬ್ಬ ಮೇರುಕಲಾಗಾರ, ಮದ್ದಳೆಯ ಮೋಡಿಗಾರ ಕೆಮ್ಮಣ್ಣು ನಾರಣಪ್ಪಯ್ಯನವರು ಸ್ಥಾನಿಕ ಸಮಾಜದ ಒಂದು ಅನರ್ಘ್ಯರತ್ನ. ನಾರಣಪ್ಪಯ್ಯನವರ ಕೆಮ್ಮಣ್ಣು ಮನೆಯು ಚೆಂಡೆ, ಮದ್ದಳೆ, ವೇಷ ಭೂಷಣ, ಯಕ್ಷಗಾನ ಹಾಡು ಕುಣಿತಗಳು, ಕಲಾಗಾರರ ಸೇರುವಿಕೆ ಸದಾ ಅನುರಣಿಸುತ್ತಿದ್ದ ಒಂದು ನಾದಮಯ ಲೋಕ.

ತನ್ನ ತಂದೆ ಶ್ರೀನಿವಾಸಯ್ಯನವರ ಯಕ್ಷ ಪ್ರೀತಿ ಇವರಲ್ಲಿಯೂ ಸಿದ್ದಿಸಿ ಇವರು ಅಸಾಮಾನ್ಯ ಸಾಧಕರಾಗಿ ಬೆಳೆಯಲು ಪ್ರೇರಣೆಯಾಯಿತು. ವೃತ್ತಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಶಾನುಭೋಗರಾಗಿ ಪ್ರಾಮಾಣಿಕತೆ, ಬದ್ಧತೆ, ಸೇವಾನಿಷ್ಠತೆಯಿಂದ ಕಾರ್ಯ ನಿರ್ವಹಿಸಿ ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆಯವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದವರು. ರೈತರ ಸಂಕಷ್ಟದ ಸಮಯದಲ್ಲಿ ನಿರೀಕ್ಷಿತ ಬೆಳೆಬಾರದಿದ್ದಾಗ ಮಾಲಿಕರ ಹಾಗೂ ಒಕ್ಕಲುಗಳ ಹಿತವನ್ನು ಬಯಸಿ ನಾಜೂಕಾಗಿ ಅಷ್ಟೇ ಪಾರದರ್ಶಕವಾಗಿ ತನ್ನ ಉದ್ಯೋಗವನ್ನು ನಿರ್ವಹಿಸಿದ ಮೇರು ವ್ಯಕ್ತಿತ್ವ ಇವರದು.

ಮುಲ್ಕಿ ಸುಬ್ಬಣ್ಣಯ್ಯನವರಿಂದ ಮದ್ದಳೆವಾದನವನ್ನು ಕಲಿತ ನಾರಣಪ್ಪಯ್ಯನವರು ಈ ಕಲೆ ಬಹಳ ಪವಿತ್ರ ಎಂದೇ ಭಾವಿಸಿದ್ದರು. ಯಕ್ಷಗಾನವೇ ಇರಲಿ, ತಾಳ ಮದ್ದಳೆಯೇ ಇರಲಿ. "ನಾರಣಪ್ಪಯ್ಯನವರು ಇದ್ದಾರೆ" ಎಂದಾದರೆ ಅದೇ ಹಿಮ್ಮೇಳಕ್ಕೆ ಒಂದು ತಾರಾಮೌಲ್ಯವನ್ನು ತಂದು ಕೊಡುತ್ತಿದ್ದ ದಿನಗಳಾಗಿದ್ದವು ಅವು. ಪದ್ಯದ ಭಾವವನ್ನು ಮದ್ದಳೆಯಲ್ಲೂ ವ್ಯಕ್ತಪಡಿಸುವ ವಿಶಿಷ್ಟ ಶೈಲಿಯನ್ನು ಇವರು ರೂಡಿಸಿಕೊಂಡಿದ್ದರು. ಚೆಂಡೆ ಮದ್ದಳೆಯ ವಾದನದಲ್ಲಿ ಬೆರಳುಗಳು ಮಾತ್ರ ಚಲಿಸುತ್ತಿದ್ದ ಹಾಗೆ ಇವರ ಬೆರಳುಗಳಿಂದ ಬರೆದ ಬರಹಗಳಲ್ಲಿಯೂ ಅಷ್ಟೇ ಗಟ್ಟಿತನವಿತ್ತು. ಇವರು ಬರೆದ "ಗಯಾಸುರ ಚರಿತೆ" ಮತ್ತು "ಕಮಲಕುಮಾರಿ" ಎಂಬ ಎರಡು ಪ್ರಸಂಗಗಳು ಯಕ್ಷಗಾನ ಪ್ರಸಂಗದ ಮುತ್ತುಗಳಾಗಿದ್ದವು.

ಇವರ ಪಾಂಡಿತ್ಯ, ಗಂಭೀರ ವ್ಯಕ್ತಿತ್ವ, ಸಹೃದಯೀ ಮನೋಭಾವ, ಸತತ ಪ್ರಯೋಗ ಶೀಲತೆ, ಸ್ವರಶಕ್ತಿ ಮತ್ತು ತಾಳದ ಹಿಡಿತ. ಕಲಾ ಸಾಮರ್ಥ್ಯ, ಅಪೂರ್ವ ಕೈಚಳಕ, ನಾದರೆಘೀಂಕಾರ ಇದೆಲ್ಲ ಹತ್ತೂರಿನ ಯಕ್ಷಪ್ರೇಮಿಗಳ, ಕಲಾರಸಿಕರ ಮೆಚ್ಚುಗೆ ಆದರಗಳಿಗೆ ಪಾತ್ರವಾಗಿತ್ತು ಎಂಬುದು ಉಲ್ಲೇಖನೀಯ.

ನಾರಣಪ್ಪಯ್ಯನವರ ಕುಟುಂಬದಲ್ಲಿಯೂ ಕಲೆ ಮೇಳೈಸಿದೆ. ಅವರ ಸಹೋದರನ ಮಗ ಕೆಮ್ಮಣ್ಣು ವೆಂಕಟರಾವ್ ಓರ್ವ ಮದ್ದಳೆಗಾರರಾಗಿ ಹೆಸರು ಪಡೆದವರು. ಕೆಮ್ಮಣ್ಣು ನಾರಣಪ್ಪಯ್ಯನವರ ಮದ್ದಳೆಯ ನಾದದ ಶೈಲಿ ವೆಂಕಟರಾಯರಲ್ಲಿ ಕಾಣಬಹುದೆಂದು ಬಲ್ಲವರು ಹೇಳಿದ್ದು ಇದೆ. ಕೆಮ್ಮಣ್ಣು ವೆಂಕಟರಾವ್‌ರವರ ಮಗ ಕೆಮ್ಮಣ್ಣು ಸತೀಶ ಕುಮಾರರವರು ಗಮಕಿಗಳಾಗಿ, ಸಾಹಿತ್ಯ ಪರಿಚಾರಕರಾಗಿ ಹೆಸರು ಪಡೆದವರು. ಉಡುಪಿ ಜಿಲ್ಲೆಯ ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಈಗಲೂ ದುಡಿಯುತ್ತಿದ್ದಾರೆ. ಇನ್ನೋರ್ವ ಮಗ ಕೆಮ್ಮಣ್ಣು ಬಾಲಕೃಷ್ಣ ರಾವ್‌ರವರು ಕೂಡಾ ಚೆಂಡೆ ವಾದಕರು. ಕೆಮ್ಮಣ್ಣು ನಾರಣಪ್ಪಯ್ಯನವರ ಮಗ ಕೆಮ್ಮಣ್ಣು ಶಿವರಾವ್‌ರವರೂ ಚೆಂಡೆ ಮದ್ದಳೆ ಅಭ್ಯಸಿಸಿದ್ದು ಅಧ್ಯಾಪಕ ವೃತ್ತಿಯಲ್ಲೇ ಮುಂದುವರಿದರು. ಕೆಮ್ಮಣ್ಣು ಶಿವರಾವ್‌ರವರ ಮಕ್ಕಳಾದ ಕೆಮ್ಮಣ್ಣು ದೇವಿಪ್ರಸಾದ್ ಮತ್ತು ಕೃಷ್ಣ ಪ್ರಸಾದ್ ಇವರೀರ್ವರೂ ಉತ್ತಮ ಚೆಂಡೆ ಮದ್ದಳೆಕಾರರಾಗಿ ಗುರುತಿಸಿಕೊಂಡಿದ್ದಾರೆ. ನಾರಣಪ್ಪಯ್ಯನವರ ಸಹೋದರ ಕೆಮ್ಮಣ್ಣು ಪದ್ಮನಾಭಯ್ಯ ನವರು ಉತ್ತಮ ಭಾಗವತರು. ಇವರ ಮಗಳು ಶ್ರೀಮತಿ ಗೀತಾ ಆರ್.ರಾವ್ ಅವರ ಮಗ ಕುಮಾರ ಕೂಡಾ ಚೆಂಡೆವಾದಕರಾಗಿದ್ದು ಸದ್ಯ ವೃತ್ತಿಯಲ್ಲಿ ವಿದೇಶದಲ್ಲಿದ್ದಾರೆ. ಕೆಮ್ಮಣ್ಣು ಸತೀಶ ಕುಮಾರರವರ ಮಗಳು ಶ್ರೀಮತಿ ರಾಧಿಕಾ ಸನತ್ ಹೆಬ್ಬಾರ್ ಭರತ ನಾಟ್ಯ ಪ್ರವೀಣೆ ಹಾಗೂ ಚಲನ ಚಿತ್ರದಲ್ಲಿ ಭರತನಾಟ್ಯವನ್ನು ಪ್ರದರ್ಶಿಸಿದ್ದಾರೆ.

ಒಟ್ಟಿನಲ್ಲಿ ನಾರಣಪ್ಪಯ್ಯನವರ ಕುಟುಂಬವೇ ಒಂದು ಕಲೆಯ ಜೇನುಗೂಡಾಗಿದ್ದು ಇವರ ಸಮಾಜ ಸೇವೆ ಕಲಾಸೇವೆಯನ್ನು ನಡೆಸಿಕೊಂಡು ಬರುತ್ತಿರುವುದು. ನಮಗೆಲ್ಲ ಹೆಮ್ಮೆಯ ವಿಷಯ

ಅಪ್ರತಿಮ ಕಲಾರಾಧಕ, ಚೆಂಡೆ ಮದ್ದಳೆಯ ಸೌರ್ವಭೌಮ, ಮಹೋನ್ನತ ಯಕ್ಷಗಾನ ಸಾಹಿತಿ, ಕೆಮ್ಮಣ್ಣು ನಾರಣಪ್ಪಯ್ಯನವರು ಕಲೆಯನ್ನೇ ಉಸಿರಾಗಿಸಿ ಸಾರ್ಥಕ ಜೀವನ ನಡೆಸಿದ ಸ್ಥಾನಿಕ ಸಮಾಜದ ಒಂದು ಧ್ರುವತಾರೆಯಾಗಿ ಕಂಗೊಳಿಸಿದ್ದರು. ಅವರು 24.01.1976ರಂದು ನಿಧನರಾದರು. ಆ ಹಿರಿಯ ಚೇತನಕ್ಕೆ ನಮನಗಳು.


**ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

ಪ್ರಿಯ ಭಗವದ್ಭಕ್ತರೇ, ತಾ.14–08–2018

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ
ಹಾಗೂ ತತ್ಕರಕಮಲ ಸಂಜಾತರಾದ
ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ
**ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ**

**"ಶರನ್ನವರಾತ್ರ ಉತ್ಸವ" ಹಾಗೂ ಶ್ರೀ ಚಂಡಿಕಾ ಹೋಮ"**

ದಿನಾಂಕ 09–10–2018ರಿಂದ 18–10–2018ರ ತನಕ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಈ ಕೆಳಗಿನಂತೆ ನಡೆಯಲಿರುವುದು. ಭಕ್ತಾದಿಗಳಾದ ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ಶ್ರೀ ದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ.

**ಯಂ. ನಾಗೇಶ ಶರ್ಮ**
ಅರ್ಚಕರು
ಮೊ : 9901247080

**ಟಿ. ಅಣ್ಣಪ್ಪಯ್ಯ, ತೆಂಕಿಲ**
ಅಧ್ಯಕ್ಷರು
ಫೋ : 08251–232491

**ಮತ್ತು ಆಡಳಿತ ಮಂಡಳಿ ಸದಸ್ಯರು**

## ಶುಭ ವಿವಾಹ

ಶ್ರೀಮತಿ ಅನಸೂಯ ಮತ್ತು ಕೀರ್ತಿಶೇಷ ಯು. ರುದ್ರಯ್ಯನವರ ಪೌತ್ರಿ ಹಾಗೂ ಲೋಕೋಪಯೋಗಿ ಇಲಾಖೆಯ ನಿವೃತ್ತ ರಿಜಿಸ್ಟ್ರಾರ್ ಶ್ರೀ ಲಕ್ಷ್ಮೀಕಾಂತ ಮತ್ತು ಶ್ರೀಮತಿ ರೇಖಾವತಿ ಇವರ ಪುತ್ರಿ **ಶೋಭಿತ**ಳ ವಿವಾಹವು ಮೂಡಿಗೆರೆಯಲ್ಲಿ ವಕೀಲ ವೃತ್ತಿಯಲ್ಲಿರುವ ಶ್ರೀ ಎನ್.ಎಸ್. ಜಯರಾಮರವರ ಪುತ್ರ **ಹರಿಪ್ರಸಾದ**ನೊಂದಿಗೆ ತಾ.23.8.2018ರಂದು ಉಡುಪಿಯ ರಥಬೀದಿಯಲ್ಲಿರುವ ಶ್ರೀ ಕೃಷ್ಣ ಸಭಾಭವನ"ದಲ್ಲಿ ನೆರವೇರಿತು.

**** ****

ಬೆಂಗಳೂರು ಶ್ರೀ ಶಂಕರನಾರಾಯಣ ರಾವ್ ಕರ್ವಾಲು ಮತ್ತು ಶ್ರೀಮತಿ ಸಂಧ್ಯಾರವರ ಪುತ್ರ **ಸುದರ್ಶನ** ಹಾಗೂ ಶ್ರೀ ಸಾಯಿ ವೆಂಕಟೇಶ್ ಮತ್ತು ಶ್ರೀಮತಿ ಸುಪರ್ಣಾ ಇವರ ಪುತ್ರಿ **ಶ್ವೇತಾ**ರವರ ವಿವಾಹವು ಬೆಂಗಳೂರಿನ ವಿಜಯನಗರದ ಬಂಟರ ಸಂಘದಲ್ಲಿ ತಾ.19.09.2018ರಂದು ನೆರವೇರಿತು.

**** ****

ಶ್ರೀಮತಿ ಗೀತಾ ಮತ್ತು ಶ್ರೀ ವಿಜಯ್ ಕುಮಾರ್ ಎಲ್ಲೂರು ಇವರ ಪುತ್ರಿ **ಮಾನಸ** ಹಾಗೂ ಶ್ರೀಮತಿ ಮೋಹಿನಿ ಮತ್ತು ಶ್ರೀ ವಿಜಯ ಜೆಪ್ಪು ಇವರ ಪುತ್ರ **ಶ್ರೀಜಿತ್ ವಿ.ಜೆ** ಇವರ ವಿವಾಹವು ಮಂಗಳೂರಿನ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ತಾ.21.09.2018 ರಂದು ನೆರವೇರಿತು

**** ****

ಕೊರಂಗ್ರಪಾಡಿ ದಿ.ರಾಮಚಂದ್ರ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ಇವರ ಪುತ್ರ **ಆದರ್ಶ** ಮತ್ತು ಬನ್ನಂಜೆ ಶ್ರೀಮತಿ ನಾಗೇಶ್ವರಿ ಮತ್ತು ಶ್ರೀ ಪುರುಷೋತ್ತಮರಾವ್ ಇವರ ಪುತ್ರಿ **ಐಶ್ವರ್ಯ** ಇವರ ವಿವಾಹವು ತಾ 21.09.2018ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

## ನಿಧನ

**ಶ್ರೀಮತಿ ಶಾಂತಮ್ಮ**

ಬನ್ನಂಜೆ ದಿ| ಕೆ. ರಾಮದಾಸರಾವ್‌ರವರ ಪತ್ನಿ ಶ್ರೀಮತಿ ಶಾಂತಮ್ಮರವರು 25.09.2018 ರಂದು ಸ್ವಗೃಹದಲ್ಲಿ ನಿಧನ ಹೊಂದಿದರು.

**** ****

**ಶ್ರೀ ಪಾಲಾರು ನಾರಾಯಣ ರಾಯರು**

ಬಂದಡ್ಕ ಚಿಕ್ಕಣ್ಣಮೂಲೆ ದೇವಿಕೃಪಾ ಮನೆಯ ಶ್ರೀ ಪಾಲಾರು ನಾರಾಯಣ ರಾಯರು ತಾ.12.08.2018ರಂದು ಸ್ವಗೃಹದಲ್ಲಿ ನಿಧನಹೊಂದಿದರು.

**** ****

**ಶ್ರೀಮತಿ ಮೃಣಾಲಿನಿ**

ಮಂಗಳೂರಿನ ಶ್ರೀ ವಿಜಯ್ ಕುಮಾರ್ ರವರ ಪತ್ನಿ ಶ್ರೀಮತಿ ಮೃಣಾಲಿನಿಯವರು ಅಲ್ಪ ಕಾಲದ ಅಸ್ವಾಸ್ಥ್ಯದಿಂದ ತಾ.03-10-2018 ರಂದು ನಿಧನ ಹೊಂದಿದರು.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ತಾ.27-10-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.11-11-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.29-10-2018 ಮತ್ತು ತಾ.12-11-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

ಮುಲ್ಲಡ್ಕ, ಅಂಚೆ : ಮುಂಡ್ಕೂರು – 576121 ಕಾರ್ಕಳ ತಾಲೂಕು

ಭಕ್ತ ಮಹಾಜನರೇ,

ಶ್ರೀ ಶೃಂಗೇರಿ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ ಸ್ವಸ್ತಿ! ಶ್ರೀ ಶಾಲಿವಾಹನ ವರ್ಷ 1939ನೇ ವಿಲಂಬಿ ನಾಮ ಸಂವತ್ಸರದ ಅಶ್ವಯುಜ ಪಾಡ್ಯದಿಂದ ನವಮಿ ಪರ್ಯಂತ ದಿನಾಂಕ 10.10.2018ರಿಂದ ದಿನಾಂಕ 18.10.2018ರ ವರೆಗೆ ವರ್ಷಂಪ್ರತಿ ನಡೆಯುವ **ನವರಾತ್ರ ಮಹೋತ್ಸವವು ಹಾಗೂ**

ತಾ.18-10-2018ರಂದು **ಚಂಡಿಕಾ ಹೋಮವು** ಜರಗಲಿರುವುದು.

ತಾವೆಲ್ಲರೂ ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಅನ್ನಪೂರ್ಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

**– ಬಿ.ವಿ.ರಾವ್, ಆಡಳಿತ ಮೊಕ್ತೇಸರರು 9880201725, 9980920013**

## ಶ್ರೀಶಾರದಾ ವೇದಿಕೆ – ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**
**ಇ-ಮೇಯ್ಲ್ : srisharadaudupi@gmail.com**
**ವೆಬ್‌ಸೆಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

ಆಜೀವ ಸದಸ್ಯರು : ರೂ.500/-, ದಾನಿಗಳು : ರೂ.1000/-,
ಪೋಷಕರು : ರೂ.5000/-, ಮಹಾಪೋಷಕರು : ರೂ.10000/-

### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/8ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಕರ್ನಾಟಕ ಬ್ಯಾಂಕ್, ಕುಂಜಿಬೆಟ್ಟು ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 8032500102881601 at Karnataka Bank, Kunjibettu Branch, Udupi IFSC Code KARB0000803**

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

॥ ಶ್ರೀ ಕ್ಷೇತ್ರ ಉದಯಾದ್ರಿ ॥

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಉದಯಾದ್ರಿ ಪಡುಬಿದ್ರಿ, ಉಡುಪಿ ಜಿಲ್ಲೆ–574111**

ಪ್ರಿಯರೇ,

ಸ್ವಸ್ತಿ! ಶ್ರೀ ವಿಲಂಬಿ ನಾಮ ಸಂ।ರದ ಕನ್ಯಾ ಮಾಸ ಆಶ್ವೀಜ ಶುದ್ಧ ಅಷ್ಟಮಿಯಂದು **ದಿನಾಂಕ 17–10–2018ನೇ ಬುಧವಾರ ದುರ್ಗಾಷ್ಟಮಿಯಂದು ಶ್ರೀ ಕ್ಷೇತ್ರದಲ್ಲಿ**

### ಶ್ರೀ ಚಂಡಿಕಾ ಹೋಮವು

ಸಂಪನ್ನಗೊಳ್ಳಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ, ಭಾಗವಹಿಸಿ, ಶ್ರೀಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ, ಶ್ರೀ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಜಗದಾಭಿರಾಮ ಸ್ವಾಮಿ** – ಪ್ರಧಾನ ಅರ್ಚಕರು
**ಪಿ. ರಘುವೀರ ರಾವ್** – ಅಧ್ಯಕ್ಷರು
**ಕರುಣಾಕರ್ ಬೆಳ್ಳೆ** – ಗೌರವ ಅಧ್ಯಕ್ಷರು
**ಶ್ರೀನಿವಾಸ ಶರ್ಮ, ಪಾದೆಬೆಟ್ಟು** – ಕಾರ್ಯದರ್ಶಿ
**ಪಿ.ಡಿ. ಶೇಖರ ರಾವ್** – ಖಜಾಂಚಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು

## ತುಲಾ ಮಾಸದ ವಿಶೇಷ ದಿನಗಳು


| | | | |
|---|---|---|---|
| 17–10–2018 | ತುಲಾ ಸಂಕ್ರಮಣ, ದುರ್ಗಾಷ್ಟಮಿ | 03–11–2018 | ಸ್ಮಾರ್ತೈಕಾದಶಿ |
| 18–10–2018 | ಮಹಾನವಮಿ, ಶಾರದಾ ವಿಸರ್ಜನಂ | 04–11–2018 | ಭಾಗವತ, ವೈಷ್ಣವೈಕಾದಶಿ |
| 19–10–2018 | ವಿಜಯದಶಮಿ, ಶ್ರೀ ಶಾರದಾಮಂಟಪದಲ್ಲಿ ಚಂಡಿಕಾಹೋಮ | 05–11–2018 | ಸಾಯಂ ಜಲಪೂರಣಂ ತೈಲಾಭ್ಯಂಜನ ಮುಂಜಾನೆ 5.04 |
| | | 06–11–2018 | ನರಕಚತುರ್ದಶಿ ಯಮತರ್ಪಣಂ |
| 20–10–2018 | ಸರ್ವೈಕಾದಶಿ | 07–11–2018 | ಅಮಾವಾಸ್ಯಾ, ಬಲೀಂದ್ರಪೂಜೆ, ದೀಪಾವಳೀ, ಧನಲಕ್ಷ್ಮೀಪೂಜೆ |
| 22–10–2018 | ಶುಕ್ರಾಸ್ತ | | |
| 24–10–2018 | ಹುಣ್ಣಿಮೆ | 08–11–2018 | ಬಲಿಪಾಡ್ಯ, ಗೋಪೂಜೆ ಕಾರ್ತಿಕ ಮಾಸ ಶುಕ್ಲಪಕ್ಷಾರಂಭ ತುಳಸೀ ಪೂಜಾರಂಭ |
| 25–10–2018 | ಶರದೃತು ಅಶ್ವಯುಜ ಮಾಸ ಕೃಷ್ಣಪಕ್ಷಾರಂಭ | | |
| 27–10–2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 8.31 | 16–11–2018 | ವೃಶ್ಚಿಕ ಸಂಕ್ರಮಣ, ಗುರು ಅಸ್ತ |
| | | 19–11–2018 | ಸರ್ವೈಕಾದಶಿ |
| 01–11–2018 | ಪೂರ್ವೇ ಶುಕ್ರೋದಯ: | 20–11–2018 | ಉತ್ಥಾನ ದ್ವಾದಶಿ, ತುಳಸಿಪೂಜಾ |

## ಶ್ರೀ ಶಾರದ ಭಜನಾ ಮಂಡಳಿಯಿಂದ ಸರಣಿ ಕಾರ್ಯಕ್ರಮಗಳು




ಉಡುಪಿ ಸಾರ್ವಜನಿಕ ಶ್ರೀ ಗಣೇಶೋತ್ಸವ ಸಮಿತಿ (ರಿ.) ಕಡಿಯಾಳಿಯವರಿಂದ ಆಚರಿಸಲ್ಪಟ್ಟ 52ನೇ ಗಣೇಶೋತ್ಸವದಲ್ಲಿ ತಾ.12.09.2018 ರಂದು ಭಜನಾ ಕಾರ್ಯಕ್ರಮವು ಶ್ರೀಶಾರದಾ ಭಜನಾ ಮಂಡಳಿಯಿಂದ ಸುಶ್ರಾವ್ಯವಾಗಿ ನಡೆಯಿತು. ಮರುದಿನ ನಡೆದ ಸಂಗೀತ ಸ್ಪರ್ಧೆಗೆ ಶ್ರೀಮತಿ ವಿದ್ಯಾ ಸುದರ್ಶನ್‌ರವರು ನಿರ್ಣಾಯಕರಾಗಿ ಭಾಗವಹಿಸಿದ್ದರು. ತಾ.23–09–2018ರಂದು ಕಡಿಯಾಳಿಯಲ್ಲಿ ವಿಪ್ರ ಸಂಘದ ವತಿಯಿಂದ ನಡೆದ ಭಜನಾ ಸ್ಪರ್ಧೆಯಲ್ಲಿ ಭಾಗವಹಿಸಿ ಮೆಚ್ಚುಗೆ ಪಡೆದರು. ಶ್ರೀಮತಿ ಯಶೋದಾ ಕೋಲ್ಪೆಯವರು ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು.

## ಭರತನಾಟ್ಯ ಪರೀಕ್ಷೆ: ಉಡುಪಿ ಜಿಲ್ಲೆಗೆ ಪ್ರಥಮ



ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ, ಬೆಂಗಳೂರು, ಇವರು ನಡೆಸಿರುವ 2017–18ನೇ ಸಾಲಿನ ಭರತನಾಟ್ಯ ಸೀನಿಯರ್ ಗ್ರೇಡ್ ಪರೀಕ್ಷೆಯಲ್ಲಿ ಮಣಿಪಾಲ ಮಾಧವಕೃಪಾ ಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರೇರಣಾ ಎಂ ರಾವ್, ಶೇ.96 ಅಂಕ ಪಡೆದು ಉಡುಪಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಉಡುಪಿಯ ಹೆಜ್ಜೆ–ಗೆಜ್ಜೆ ನೃತ್ಯ ಸಂಸ್ಥೆಯ ವಿದುಷಿ ಶ್ರೀಮತಿ ಯಶಾ ರಾಮಕೃಷ್ಣ ಅವರ ಶಿಷ್ಯೆಯಾಗಿರುವ ಇವರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶಾರದಾ ಮಂಟಪ, ಉಡುಪಿಯ ನಿರ್ದೇಶಕರಾದ ಡಾ. ಸಂತೋಷ ರಾವ್ ಹಾಗೂ ಮಹಿಳಾ ವೇದಿಕೆಯ ಸಂಚಾಲಕಿಯಾದ ಪ್ರೀತಿ ಎಸ್. ರಾವ್ ದಂಪತಿಯ ಪುತ್ರಿ. ಸಂಗೀತ ಜೂನಿಯರ್ ಗ್ರೇಡ್ ಪರೀಕ್ಷೆಯಲ್ಲಿಯೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದ ಇವರು, ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾಸಂಘದ ಸಕ್ರೀಯ ಸದಸ್ಯೆ.

## ಶ್ರೀ ಕೇದಗೆ ಹರ್ಷಕುಮಾರ್ ದಂಪತಿಗಳಿಗೆ ಸನ್ಮಾನ




ಮಂಗಳೂರಿನಲ್ಲಿ ಜರಗಿದ ಲಯನ್ಸ್ ಕ್ಲಬ್ ಮಂಗಳೂರು, ರೋಟರಿ ಕ್ಲಬ್ ಮಂಗಳೂರು ಹಾಗೂ ರೋಟರಿ ಕ್ಲಬ್ ಮೂಡಬಿದ್ರೆ ಇವರು ಜಂಟಿಯಾಗಿ ಆಯೋಜಿಸಿದ್ದ ವನಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಮಂಗಳೂರಿನ ಶ್ರೀ ಕೇದಗೆ ಹರ್ಷಕುಮಾರ್ ಹಾಗೂ ಕನಕವಲ್ಲಿ ದಂಪತಿಗಳನ್ನು ಸನ್ಮಾನಿಸಲಾಯಿತು

## ಶ್ರೀಮತಿ ರಜನಿ ಹೆಬ್ಬಾರ್‌ರಿಗೆ ಸನ್ಮಾನ



ಉಡುಪಿ ನಗರ ಸಭೆಗೆ ಒಳಕಾಡು ವಾರ್ಡ್‌ನಿಂದ ಸದಸ್ಯೆಯಾಗಿ ಆಯ್ಕೆಯಾದ ನಮ್ಮ ಸಂಘದ ನಿರ್ದೇಶಕಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ರವರ ಪತ್ನಿ ಶ್ರೀಮತಿ ರಜನಿ ಹೆಬ್ಬಾರ್ ರವರನ್ನು ಸಂಘದ ವತಿಯಿಂದ ತಾ 14–09–2018 ರಂದು ಸನ್ಮಾನಿಸಲಾಯಿತು. ಉಡುಪಿಯ ವೈಕುಂಠಬಾಳಿಗಾ ಕಾನೂನು ವಿದ್ಯಾಲಯದ ಪ್ರಾಂಶುಪಾಲೆ ಶ್ರೀಮತಿ ನಿರ್ಮಲಾ ರಾವ್ ರವರು ಅತಿಥಿಯಾಗಿ ಆಗಮಿಸಿದ್ದರು. ಶ್ರೀಮತಿ ರಜನಿ ಹೆಬ್ಬಾರ್ ರವರನ್ನು ಅಭಿನಂದಿಸುತ್ತಾ ಮಹಿಳೆಯರು ತಮ್ಮ ಮಕ್ಕಳು ನಮ್ಮ ಸಂಸ್ಕೃತಿಯನ್ನು ಅನುಸರಿಸುವಂತೆ ನೋಡಿಕೊಳ್ಳಬೇಕೆಂದು ಕಿವಿಮಾತು ಹೇಳಿದರು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್ ಹಾಗೂ ಕೋಶಾಧಿಕಾರಿ ಶ್ರೀ ಜಯರಾಮರಾವ್ ವೇದಿಕೆಯಲ್ಲಿದ್ದರು. ಶ್ರೀಮತಿ ರಜನಿ ಹೆಬ್ಬಾರ್ ತಮ್ಮ ಅನಿಸಿಕೆಗಳನ್ನು ಸಭೆಗೆ ತಿಳಿಸಿದರು. ಶ್ರೀ ಪ್ರಭಾಕರ ಭಂಡಿ ಧನ್ಯವಾದವಿತ್ತರು. ಶ್ರೀ ಕೃಷ್ಣಕುಮಾರ್ ಮಟ್ಟು ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯವೂ ಅಂದೇ ನೆರವೇರಿತು.

## ಶ್ರೀ ಕೊಕ್ರಾಡಿ ಸುರೇಶರಾಯರಿಗೆ ಗೌರವಾರ್ಪಣೆ



ನಿವೃತ್ತ ಗಡಿಭದ್ರತಾಪಡೆಯ ಯೋಧ, ನಮ್ಮ ಸಂಘದ ನಿಕಟಪೂರ್ವ ಕಾರ್ಯದರ್ಶಿ ಶ್ರೀ ಕೊಕ್ರಾಡಿ ಸುರೇಶರಾಯರು ಬ್ರಹ್ಮಾವರದ ಜಿ.ಎಂ.ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ಸ್ವಾತಂತ್ರೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ವಿದ್ಯಾರ್ಥಿಗಳೊಂದಿಗೆ ಸೇನಾನಿಯಾಗಿದ್ದ ತನ್ನ ಅನುಭವಗಳನ್ನು ಹಂಚಿಕೊಂಡರು. ಆ ಸಂದರ್ಭದಲ್ಲಿ ಶಾಲಾ ಆಡಳಿತಮಂಡಳಿಯವರು ಅವರನ್ನು ಗೌರವಿಸಿದರು.



## ಸಿ.ಎ. ಪರೀಕ್ಷೆಯಲ್ಲಿ ಸಾಧನೆ

ಶ್ರೀ ಪಿ. ಜಯರಾಮ್ ರಾವ್ ಹಾಗೂ ಶೋಭಾರವರ ಪುತ್ರ ಹರ್ಷಿತ್ ರಾವ್ ಸಿ.ಎ ಫೈನಲ್ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೆ ಉತ್ತೀರ್ಣನಾಗಿರುತ್ತಾನೆ. ಪ್ರಸ್ತುತ ಜೆ.ಪಿ. ಮೋರ್ಗನ್ ಚೇಸ್ ಕಂಪೆನಿಗೆ ಆಯ್ಕೆಯಾಗಿರುತ್ತಾರೆ. ಇವನು ಉತ್ತಮ ಬ್ಯಾಡ್ಮಿಂಟನ್ ಆಟಗಾರನಾಗಿದ್ದು ಹಲವಾರು ಪ್ರಶಸ್ತಿ ಗಳಿಸಿರುತ್ತಾರೆ.

With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
Real Estate Developer Rating
CRISIL DA3+
CREDAI

## ಮೂಡುಬಿದಿರೆ ಸಂಘದಲ್ಲಿ ಆಟಿದ ಕೂಟ ಮತ್ತು ಮಹಾಸಭೆ



ತಾ.12.08.2018ನೇ ರವಿವಾರ ಕಡಲಕೆರೆ ಸಂತ ಇಗ್ನೇಶಿಯಸ್ ಸ.ಪ್ರಾ.ಹಿ ಶಾಲೆಯ ಸಭಾಭವನದಲ್ಲಿ ಮೂಡುಬಿದರೆ ಆದಿಶಂಕರ ಬ್ರಾಹ್ಮಣ ಪರಿಷತ್ತಿನ ವತಿಯಿಂದ ಆಟಿದ ಕೂಟ ಹಾಗೂ ಸಂಘದ ಮಹಾಸಭೆಯು ಜರಗಿತು. ಅಂದು ಬೆಳಿಗ್ಗೆ ಮಕ್ಕಳಿಗೆ, ಮಹಿಳೆಯರಿಗೆ ಮತ್ತು ಪುರುಷರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತು. ನಂತರ ಶ್ರೀಮತಿ ಸುಮ ಇವರ ಪ್ರಾರ್ಥನೆಯೊಂದಿಗೆ ಮತ್ತು ಶ್ರೀಮತಿ ಪ್ರಭಾವತಿಯವರು ದೀಪ ಬೆಳಗಿಸುವ ಮೂಲಕ ಆಟಿದ ಕೂಟವು ಉದ್ಘಾಟನೆಗೊಂಡಿತು. ತದನಂತರ ಪರಿಷತ್ತಿನ ಸದಸ್ಯರಿಂದ ಮತ್ತು ಮಕ್ಕಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನದ ಭೋಜನಕ್ಕೆ ಪರಿಷತ್ತಿನ ಸದಸ್ಯರು ರುಚಿರುಚಿಯಾದ ವಿವಿಧ ಖಾದ್ಯಗಳನ್ನು ಮನೆಯಲ್ಲಿ ಮಾಡಿ ತಂದಿದ್ದರು. ಭೋಜನದ ನಂತರ ಸಂಘದ ಅಧ್ಯಕ್ಷರಾದ ಬಿ. ಚಂದ್ರಶೇಖರರಾಯರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಜರಗಿತು. ಶ್ರೀಮತಿ ಶಶಿಕಲಾ. ಶ್ರೀಮತಿ ವೃಂದಾ, ಶ್ರೀಮತಿ ಸುಮಾ, ಶ್ರೀಮತಿ ಕವಿತಾ ಇವರ ಪ್ರಾರ್ಥನೆಯೊಂದಿಗೆ ಮತ್ತು ಬಿ. ಚಂದ್ರಶೇಖರ ರಾಯರು ದೀಪ ಬೆಳಗಿಸುವ ಮೂಲಕ ಸಭಾ ಕಾರ್ಯಕ್ರಮವು ಪ್ರಾರಂಭಗೊಂಡಿತು. ಜತೆಕಾರ್ಯದರ್ಶಿ ಶ್ರೀ.ಬಿ. ಗಣೇಶ ರಾವ್ ಮಹಾಸಭೆಯ ನೋಟೀಸನ್ನು ಓದಿದರು. ನಿರ್ದೇಶಕ ಶ್ರೀ.ಬಿ. ಜಯರಾಮ ರಾಯರು ಗಣ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಯಂ. ಜಗದೀಶ ರಾವ್ ವರದಿಯನ್ನು ಮಂಡಿಸಿದರು. ಖಜಾಂಚಿ ಶ್ರೀ ರಾಯಿ ರಾಜ ಕುಮಾರ್ ಲೆಕ್ಕಪತ್ರವನ್ನು ಸಭೆಗೆ ಮಂಡಿಸಿದರು.

ಸದಸ್ಯರಾದ ಶಿರ್ತಾಡಿ ಶ್ರೀ.ಕೆ ಸೂರ್ಯನಾರಾಯಣ ರಾಯರನ್ನು ಅಧ್ಯಕ್ಷರಾದ ಬಿ. ಚಂದ್ರಶೇಖರ ರಾಯರು ಮತ್ತು ಗಣ್ಯರು ಶಾಲು, ಹೂ, ಹಾರ, ಹಾಕಿ ಸನ್ಮಾನ ಪತ್ರ, ಸ್ಮರಣಿಕೆ, ಫಲವಸ್ತುಗಳನ್ನು ನೀಡಿ ಸನ್ಮಾನಿಸಿದರು. ಸನ್ಮಾನ ಪತ್ರವನ್ನು ಶ್ರೀಮತಿ ಸುಮ ಓದಿದರು. ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ಕು। ಮೇಘನಾ ಇವರನ್ನು ಅಧ್ಯಕ್ಷರು ಸ್ಮರಣಿಕೆ, ನಗದು ಮತ್ತು ಹಣ್ಣು ಹಂಪಲುಗಳನ್ನು ನೀಡಿ ಪುರಸ್ಕರಿಸಿದರು. ಶ್ರೀಮತಿ ಜ್ಯೋತಿ ಇವರು ಪ್ರತಿಭಾ ಪುರಸ್ಕಾರ ಪಡೆದ ಕು. ಮೇಘನಾ ರವರನ್ನು ಸ್ವಾಗತಿಸಿದರು. ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗೌರವಾಧ್ಯಕ್ಷ ಶ್ರೀ ಬಿ. ಕೃಷ್ಣರಾಜ ರಾವ್ ಮತ್ತು ಅಧ್ಯಕ್ಷರು ಬಹುಮಾನಗಳನ್ನು ನೀಡಿದರು. ವಿಜೇತರ ಪಟ್ಟಿಯನ್ನು ಶ್ರೀಮತಿ ಕವಿತಾ ಓದಿದರು.

ಪರಿಷತ್ತಿನ ವಿದ್ಯಾರ್ಥಿ ವೇತನ ನಿಧಿಗೆ ರೂಪಾಯಿ 20,000/– ವನ್ನು ನೀಡಿದ ಮತ್ತು ಮಹಾಪೋಷಕ ಸದಸ್ಯರಾಗಿ ಸೇರ್ಪಡೆಗೊಂಡ ಶ್ರೀ ಸುರೇಶ್ ಕುಮಾರ್ ರಾವ್ ಲಾಡಿ ಇವರನ್ನು ಅಧ್ಯಕ್ಷರು ಶಾಲು ಹೊದಿಸಿ ಸ್ಮರಣಿಕೆ ನೀಡಿ ಗೌರವಿಸಿದರು.

ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಡೈರೆಕ್ಟರ್ ಶ್ರೀ ಯಂ. ಪ್ರಕಾಶ ರಾವ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇವರಿಗೆ ಅಧ್ಯಕ್ಷರು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು. ಪರಿಷತ್ತಿನ ಜತೆ ಕಾರ್ಯದರ್ಶಿ ಶ್ರೀ ಯೋಗೀಶ ರಾವ್ ಲಾಡಿ ಇವರು ಧನ್ಯವಾದ ಸಮರ್ಪಿಸಿದರು. ಸಭಾ ಕಾರ್ಯಕ್ರಮವನ್ನು ಶ್ರೀ ರಾಯಿ ರಂಜಿತ್ ರಾವ್ ನಿರೂಪಿಸಿದರು. ವೇದಿಕೆಯಲ್ಲಿ ಪರಿಷತ್ತಿನ ಗೌರವಾಧ್ಯಕ್ಷ ಬಿ, ಕೃಷ್ಣರಾಜ ರಾವ್, ಅಧ್ಯಕ್ಷ ಬಿ. ಚಂದ್ರಶೇಖರ ರಾವ್, ಕಾರ್ಯದರ್ಶಿ ಯಂ ಜಗದೀಶ ರಾವ್, ಖಜಾಂಚಿ ಶ್ರೀ ರಾಯಿ ರಾಜ್ ಕುಮಾರ್ ಮತ್ತು ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಜ್ಯೋತಿ ಉಪಸ್ಥಿತರಿದ್ದರು. ತದನಂತರ ಪರಿಷತ್ತಿನ ಸದಸ್ಯರಿಂದ ವಿವಿಧ ಮನೋರಂಜನಾ ಕಾರ್ಯವು ಜರಗಿತು. ಶ್ರೀ ಜನಾರ್ಧನ ರಾವ್ ನಂದಿಕೂರು ಇವರು ವಿದ್ಯಾರ್ಥಿ ವೇತನ ನಿಧಿಗೆ ರೂ.10,000/– ದೇಣಿಗೆಯನ್ನು ನೀಡಿದರು. ಈ ಸಭೆಗೆ ಪಡುಬಿದ್ರಿ ಸ್ಥಾನಿಕ ಸಭಾದ ಅಧ್ಯಕ್ಷರಾದ ಶ್ರೀ ಮೋಹನ ರಾಯರು ಸದಸ್ಯರೊಂದಿಗೆ ಬಂದು ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದು ಸಭೆಯನ್ನು ಮೆರಗುಗೊಳಿಸಿದರು.

**ಯಂ. ಜಗದೀಶ ರಾವ್**

## ಸುರತ್ಕಲ್ ಸಂಘದಿಂದ ಶೃಂಗೇರಿ ಯಾತ್ರೆ



ಸ್ಥಾನಿಕ ಬ್ರಾಹ್ಮಣ ಸಮಾಜದವರಿಂದ ಶೃಂಗೇರಿ ಗುರುಗಳ ಚಾತುರ್ಮಾಸದ ಸಂದರ್ಭದಲ್ಲಿ ಚೌತಿಯ ಹಿಂದಿನ ಆದಿತ್ಯವಾರದಂದು ಗುರುಗಳಿರುವಲ್ಲಿಗೆ ತೆರಳಿ ಅವರ ದರ್ಶನವನ್ನು ಪಡೆದು ಆಶೀರ್ವಾದ ಪಡೆಯುವುದು ಸ್ಥಾನಿಕ ಸಮಾಜ ಬಾಂಧವರ ಪ್ರತಿ ವರ್ಷದ ಚಟುವಟಿಕೆಯಾಗಿದೆ. ಅಂತೆಯೇ ಈ ದಿನವೂ ನಮ್ಮ ಸಮಾಜ ಬಾಂಧವರು ರಾಜ್ಯದಲ್ಲೆಡೆಯಿಂದ ಬಂದು ಶೃಂಗೇರಿಯಲ್ಲಿ ಒಟ್ಟು ಸೇರುವ ದಿನವಾಗಿದೆ.

ಈ ವರ್ಷ ದಿನಾಂಕ 09–09–2018ನೇ ರವಿವಾರವು ನಮ್ಮ ಸಮಾಜ ಬಾಂಧವರ ಶೃಂಗೇರಿ ಭೇಟಿಯ ದಿನವಾಗಿತ್ತು. ಅಂದು ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಸುರತ್ಕಲ್, ಈ ವ್ಯಾಪ್ತಿಯಲ್ಲಿನ ನಮ್ಮ ಸಮಾಜ ಬಾಂಧವರು ಸಂಘದ ಅಧ್ಯಕ್ಷರಾದ ಕೆ.ಮಾಧವ ರಾವ್, ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್, ಶ್ರೀ ಗೋಪಾಲಕೃಷ್ಣ, ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಕೋಶಾಧಿಕಾರಿಯಾದ ಶ್ರೀ ರಾಘವೇಂದ್ರ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳಾ ಇವರ ನೇತೃತ್ವದಲ್ಲಿ ಹಿರಿಯರು ಹೆಂಗಸರು, ಯುವವೇದಿಕೆಯ ಸದಸ್ಯರು ಸೇರಿ ಸುಮಾರು 60 ಮಂದಿ ಶೃಂಗೇರಿಗೆ ಪ್ರಯಾಣ ಹೊರಟೆವು.

ಅಂದು ಬೆಳಿಗ್ಗೆ 6.30ಕ್ಕೆ ಸರಿಯಾಗಿ ನಮ್ಮ ಸಮಾಜ ಬಾಂಧವರನ್ನು ಹೊತ್ತ ಬಸ್ಸು ಶೃಂಗೇರಿಗೆ ಹೊರಟಿತು. ಪಡುಬಿದ್ರಿಗೆ ಬರುತ್ತಿದ್ದಂತೆ ಅಲ್ಲಿನ ಸಮಾಜ ಬಾಂಧವರು ನಮ್ಮನ್ನು ಕೂಡಿಕೊಂಡರು. ಪರಸ್ಪರ ಕುಶಲೋಪರಿಯನ್ನು ಮಾಡಿ, ಅವರೊಂದಿಗೆ ಮುಂದೆ ಸಾಗಿದೆವು. ಸುಮಾರು 8.30ರ ಹೊತ್ತಿಗೆ ಕಾರ್ಕಳದ ಸಮೀಪವಿರುವ ಬಜಗೋಳಿಯಲ್ಲಿರುವ ಶ್ರೀ ಉಮೇಶ್ ರಾಯರ ಮನೆಯಲ್ಲಿ ಉಪಹಾರಕ್ಕಾಗಿ ಇಳಿದೆವು. ಅಲ್ಲಿ ಉಪಹಾರವನ್ನು ಮುಗಿಸಿ, ಶ್ರೀ ಉಮೇಶ್ ರಾಯರ ಕುಟುಂಬದವರಿಗೆ ನಮನವನ್ನು ಸಲ್ಲಿಸಿ, ಶೃಂಗೇರಿಗೆ ತೆರಳಿದೆವು. ಬೆಳಿಗ್ಗೆ ಸುಮಾರು 11.15ಕ್ಕೆ ಸರಿಯಾಗಿ ಶೃಂಗೇರಿಗೆ ತಲುಪಿ, ದೇವಸ್ಥಾನದಲ್ಲಿ ನಮಗೆ ಮೀಸಲಿಟ್ಟ ಛತ್ರಗಳಲ್ಲಿ ಕೈಕಾಲು ಮುಖ ತೊಳೆದುಕೊಂಡು ನೇರವಾಗಿ ಮಾತೆ ಶ್ರೀ ಶಾರದಾಂಬೆಯ ಬಳಿ ತೆರಳಿ ದರ್ಶನಗೈದು, ಮುಂದೆ ಗುರುಗಳ ದರ್ಶನಕ್ಕೆ ತೆರಳಿದೆವು. ಚಾತುರ್ಮಾಸಕ್ಕೆ ಕುಳಿತಿರುವ ಗುರುಗಳ ಸಭಾಂಗಣವು ಸಮಾಜ ಬಾಂಧವರಿಂದ ತುಂಬಿತ್ತು. ನಮ್ಮ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಗುರುಗಳಿಗೆ ಪಾದ ಪೂಜೆ ಸಲ್ಲಿಸಿ, ನಂತರ ಗುರುಗಳಿಂದ ಫಲ ಮಂತ್ರಾಕ್ಷತೆ ಪಡೆದು ಧನ್ಯರಾದೆವು. ಈ ಸಂದರ್ಭದಲ್ಲಿ ಮಠದಲ್ಲಿ ಸುಹಾಸಿನಿಯರಿಗೆ ಪ್ರಸಾದ ರೂಪದಲ್ಲಿ ಸೀರೆಯನ್ನು ಕೊಡುತ್ತಿದ್ದರು. ಅದನ್ನು ಪಡೆದ ಬಳಿಕ ಎಲ್ಲರೂ, ಪ್ರಸಾದ ಭೋಜನವನ್ನು ಸ್ವೀಕರಿಸಿದೆವು. ಸ್ವಲ್ಪ ವಿರಾಮದ ಬಳಿಕ ಎಲ್ಲರೂ ತಮ್ಮ ಬಸ್ಸಿನೆಡೆಗೆ ತೆರಳಿದೆವು. ಮಧ್ಯಾಹ್ನ ಸುಮಾರು 3.30 ಗಂಟೆಗೆ ಹೊರಟು ಸಂಜೆ 6.30ಕ್ಕೆ ಸರಿಯಾಗಿ ನಮ್ಮ ಊರು ತಲುಪಿದೆವು.

*Power Cut !!!???*
*Install Best Quality Inverters...*
Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org